
ಹೊಯ್ಸಳ ಮಾಲೆ - 9

ಡಾ. ಎ.ಆರ್. ಕೃಷ್ಣಶಾಸ್ತ್ರೀ



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

ಹೊಯ್ಸಳ ಮಾಲೆ - 9

ಡಾ. ಎ.ಆರ್. ಕೃಷ್ಣಶಾಸ್ತ್ರೀ

ಸಿ.ಆರ್. ಸತ್ಯ

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ
ಬೆಂಗಳೂರು - 560 027

ಮೊದಲ ಮುದ್ರಣ : ಮಾರ್ಚ್ 2008

ಬೆಲೆ : ರೂ. 30/-

ಮುದ್ರಣ :
ಜ್ವಾಲಾಮುಖಿ ಮುದ್ರಣಾಲಯ ಪ್ರೈ ಲಿ.
ರಾಷ್ಟ್ರಪ್ರಶಸ್ತಿ ವಿಜೇತರು
44/1, ಕೆ.ಆರ್. ರಸ್ತೆ, ಬಸವನಗುಡಿ, ಬೆಂಗಳೂರು-560 004
ಫೋನ್ : 080-26608090, 26617243
www.jwalamukhipress.com

ಒಂದು ಮಾತು

ವಿಜಯನಗರ ಸಾಮ್ರಾಜ್ಯದ ರೂವಾರಿ ವಿದ್ಯಾರಣ್ಯ, ಆದಿಶಂಕರರ ಪುರುಷರೆಂದು ಪ್ರಖ್ಯಾತರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರ ಪರಂಪರೆಯ ॥ಹೊಯ್ಸಳ ಕರ್ನಾಟಕ॥ ಬ್ರಾಹ್ಮಣ ಜನಾಂಗವು ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಈ ಪಂಗಡದವರು ರಾಜಕೀಯ, ವಾಣಿಜ್ಯ, ಕೈಗಾರಿಕೆ, ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ, ವೈದ್ಯಕೀಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಈ ರೀತಿ ಪ್ರಸಿದ್ಧಿ ಪಡೆದ ಹಿರಿಯ ವ್ಯಕ್ತಿಗಳನ್ನು ನಮ್ಮ ಯುವ ಪೀಳಿಗೆಗೆ ಪರಿಚಯಿಸಿ ಅವರಿಗೆ ಚೇತನ ಮತ್ತು ಸ್ಫೂರ್ತಿಯನ್ನು ತುಂಬುವುದೇ ಈ 'ಹೊಯ್ಸಳ ಮಾಲೆ' ಯ ಧ್ಯೇಯ. ಸಂಘದ ಮಾಜಿ ಅಧ್ಯಕ್ಷ ಹಾಗೂ ಹೆಸರಾಂತ ಕೈಗಾರಿಕೋದ್ಯಮಿ ಶ್ರೀ.ಎಂ.ವಿ. ಸತ್ಯನಾರಾಯಣರವರು ಒಂದು ಪುದುವಟ್ಟನ್ನು ನಿರ್ಮಿಸಿ ನಮ್ಮ ಸಂಘದ ಮೂಲಕ ಈ ಪುಸ್ತಕ ಮಾಲೆಯನ್ನು ತರಬೇಕೆಂದು ಆಶಿಸಿದರು.

ಹಿರಿಯ ಸಾಹಿತಿಗಳು ಮತ್ತು ಗೌರವಾನ್ವಿತ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿರುವುದು ನಮ್ಮೆಲ್ಲರ ಸುಕೃತ. ಅವರೊಡನೆ ಮಾರ್ಚ್ 1 ಮತ್ತು 2 ರಂದು ಮೈಸೂರಿನಲ್ಲಿ ನಡೆಯುವ ಹೊಯ್ಸಳ ಕರ್ನಾಟಕ ಸಂಘಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಮಾಲೆಯ ಮೊದಲ 9 ಪುಸ್ತಗಳು ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘ ಕಳೆದ 64 ವರ್ಷಗಳಿಂದ ನಮ್ಮ ಜನಾಂಗದ ಸೇವೆಯಲ್ಲಿ ತೊಡಗಿದೆ. ನಮ್ಮ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ. ಪ್ರತಿ ವರ್ಷ ಪ್ರತಿಭಾವಂತ ಮತ್ತು ಆರ್ಥಿಕ ದುರ್ಬಲ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುತ್ತಿದೆ. ವರ್ಷಂಪ್ರತಿ ನಡೆಯುವ ಸಂಘ ದಿನಾಚರಣೆಯಂದು ನಮ್ಮ ಜನಾಂಗದ ಹಿರಿಯ ವ್ಯಕ್ತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಾನಾ

ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳನ್ನು ಗೌರವಿಸಲಾಗುತ್ತದೆ. ಇಂಥಾ ಎಲ್ಲಾ ಸಂಘಗಳೊಡನೆ ಕೂಡಿ ಸಹಕರಿಸಲು ನಮಗೆ ತುಂಬಾ ಸಂತಸ.

ನಾಡಿನ ಎಲ್ಲಾ ಹೊಯ್ಸಳ ಕರ್ನಾಟಕ ಸಂಘಟನೆಗಳೂ ಆಗಾಗ್ಗೆ ಕಲೆತು ಅನ್ಯೋನ್ಯತೆಯಿಂದ ಕೆಲಸ ಮಾಡಿ ಜನಾಂಗದ ವಿಶೇಷತೆಗಳನ್ನೂ-ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಎಂದಿಗಿಂತ ಇಂದು ಅತ್ಯವಶ್ಯವಾಗಿದೆ.

ಸುಮಾರು 30 ಲಕ್ಷ ರೂ. ಅಂದಾಜಿನ ಈ ಮಾಲೆಯ ಪ್ರಕಟಣಾ ಕಾರ್ಯವು ಸುಸೂತ್ರವಾಗಿ ನಡೆಯಲು ಸಂಘಕ್ಕೆ ಹೊರೆಯಾಗದಂತೆ ಒಂದು ಆವರ್ತ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಒಂದು ಪುಸ್ತಕದ ಮುದ್ರಣ–ಪ್ರಕಟಣದ ವೆಚ್ಚ ಸುಮಾರು 15 ರಿಂದ 20 ಸಹಸ್ರ ರೂ. ಗಳಾಗಬಹುದು (ನಮ್ಮ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿ ನಿಲಯಗಳಿಗೂ ಈ ಪುಸ್ತಕದ ಕೆಲವು ಪ್ರತಿಗಳನ್ನು ಉಚಿತವಾಗಿ ಕಳಿಸಲು ಯೋಜಿಸಲಾಗಿದೆ). ನಮ್ಮ ಎಲ್ಲಾ ಬಾಂಧವರೂ ಈ ಯೋಜನೆಯ ಯಶಸ್ಸಿಗೆ ಕೆಳಕಂಡಂತೆ ಸಹಾಯ ಮಾಡಬಹುದು:

1. ಒಂದು ಅಥವಾ ಹೆಚ್ಚು ಪುಸ್ತಕಕ್ಕೆ ಪ್ರಾಯೋಜಕರಾಗಬಹುದು. ಪ್ರಾಯೋಜಕರ ಹೆಸರನ್ನು ಆಯಾ ಪುಸ್ತಕದಲ್ಲಿ ಪ್ರಕಟಿಸಲಾಗುವುದು.

2. ಒಂದು ಕುಟುಂಬದಿಂದ ಅಥವಾ ಇಬ್ಬರು ಮೂವರು ಸೇರಿ ಒಂದು ಅಥವಾ ಹೆಚ್ಚು ಪುಸ್ತಕಗಳ ಪ್ರಾಯೋಜಕರಾಗಬಹುದು.

3. ಪುಸ್ತಕಗಳನ್ನು ಕೊಂಡು ನಿಮ್ಮ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಬಂಧು ಬಾಂಧವರಿಗೆ ಹಂಚುವುದು.

4. ಈ ಉದ್ದೇಶಕ್ಕಾಗಿ ದೇಣಿಗೆ ನೀಡುವುದು.

5. ಈ ಮಾಲೆಯ ಬಗ್ಗೆ ನಿಮ್ಮ ಬಂಧುಗಳಿಗೆ ತಿಳಿಸಿ ಅವರೂ ಈ ಕಾರ್ಯಗಳಲ್ಲಿ ನೆರವಾಗಲು ಪ್ರೇರೇಪಿಸುವುದು. ಪುಸ್ತಕದ ಮಾರಾಟ ಮತ್ತು ನಿಮ್ಮ

ನೆರವು ಪ್ರೋತ್ಸಾಹದಾಯಕವಾದರೆ ಸಂಘ ಪ್ರತಿ ಎರಡು ತಿಂಗಳಿಗೊಮ್ಮೆ 8 ರಿಂದ 12 ಪುಸ್ತಕಗಳನ್ನು ಪ್ರಕಟಿಸಲು ಶಕ್ತವಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ಪುಸ್ತಕ ಮಾಲೆಯನ್ನು ಮುದ್ರಿಸಲು ಅತ್ಯಂತ ಅತಿ ಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ನಮ್ಮವರೇ ಆದ ಜ್ವಾಲಾಮುಖಿ ವಾರ ಪತ್ರಿಕೆಯ ಸಂಸ್ಥಾಪಕ ದಿ. ಸಿ.ಎಸ್.ಸತ್ಯ ಇವರ ಮಕ್ಕಳಾದ ಶ್ರೀಯುತ ಶಿವಕುಮಾರ್, ರವಿಪ್ರಸಾದ್ ಮತ್ತು ಶಂಕರ್ ಇವರಿಗೆ ಸಂಘ ಆಭಾರಿಯಾಗಿದೆ.

ನಮ್ಮ ಕೋರಿಕೆಯನ್ನು ಮನ್ನಿಸಿ ವಿಷಯಗಳನ್ನು, ಉಪಯುಕ್ತ ಮಾಹಿತಿಗಳನ್ನು, ಫೋಟೋಗಳನ್ನು ಸಂಗ್ರಹಿಸಿ ಅಂದವಾಗಿ ಸಿದ್ಧಪಡಿಸಿರುವ ನಮ್ಮ ಆತ್ಮೀಯ ಲೇಖಕರಿಗೂ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ದಣಿವನ್ನೂ ಲೆಕ್ಕಿಸದೆ ನಮಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನ ಸಂಪಾದಕರಾದ ಪ್ರೊ.ಜಿ.ವೆಂಕಟಸುಬ್ಬಯ್ಯರವರಿಗೆ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಮಾಜಿ ಅಧ್ಯಕ್ಷ ಶ್ರೀ ಎಂ.ವಿ.ಸತ್ಯನಾರಾಯಣರವರಿಗೆ ನಮ್ಮ ಕೃತಜ್ಞತೆಗಳು.

ಅರಕೆರೆ ಗೌರಿಶಂಕರ

ಅಧ್ಯಕ್ಷರು

ಹೊಯ್ಸಳ ಕರ್ನಾಟಕ ಸಂಘ (ರಿ)

ಬೆಂಗಳೂರು–27

ಮುನ್ನುಡಿ

ಒಮ್ಮೆ ನಾನು ಶ್ರೀ ಎಂ.ವಿ.ಸತ್ಯನಾರಾಯಣ ಅವರೊಡನೆ ಮಾತನಾಡುತ್ತ ಇದ್ದಾಗ ಅವರು "ನಮ್ಮ ಹೊಯಿಸಳ ಕರ್ನಾಟಕ ಪಂಗಡದ ಹಿಂದಿನ ಹಿರಿಯ ವ್ಯಕ್ತಿಗಳಲ್ಲಿ ಪ್ರಸಿದ್ಧರಾಗಿದ್ದು ಅನೇಕ ಸಾಧನೆಗಳನ್ನು ಮಾಡಿದವರ ಬಗ್ಗೆ ಏನಾದರೂ ಚಾರಿತ್ರಿಕ ವಿವರಗಳಿವೆಯೊ?" ಎಂದು ಕೇಳಿದರು. ಈ ಬಗ್ಗೆ ನಾನು ಅನೇಕ ದಿನಗಳಿಂದ ಚಿಂತನೆ ಮಾಡುತ್ತಿದ್ದೆ. ಸಾಧ್ಯವಾದರೆ ಶಾಸನಗಳ ಮತ್ತು ಪ್ರಾಚೀನ ಸಾಹಿತ್ಯದ ಆಧಾರಗಳಿಂದ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೆಲವು ವಿಷಯಗಳನ್ನು ಸಂಗ್ರಹಿಸಿದ್ದೆ. 'ಹೊಯ್ಸಳ' ಎಂಬ ಶಬ್ದವು ದೇಶವಾಚಕವಾದದ್ದು. ಅದು 'ಪೊಯಿಸಣ' ಎಂಬ ಶಬ್ದದ ಈಗಿನ ರೂಪ. ಶಾಸನಗಳಲ್ಲಿ 'ಪೊಯಿಸಣ ನಾಡು' ಎಂಬ ಉಲ್ಲೇಖವಿದೆ. ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣನು ತಾನು 'ಪೊಯಸಣಿಗ' ಕುಲದವನು ಎಂದು ಹೇಳಿಕೊಂಡಿದ್ದಾನೆ. ಅವನ ಕಾಲ 1830. ನಾವೆಲ್ಲಾ ನಮ್ಮನ್ನು ಕರ್ನಾಟಕರು, ಕನ್ನಡಿಗರು, ಕನ್ನಡ ಕುಲಕ್ಕೆ ಸೇರಿದವರು ಎಂದು ಹೇಳಿಕೊಂಡಿರುವುದಕ್ಕೆ ಆಧಾರವಿದೆ. ಈ ವಿಚಾರವನ್ನು ಹಿಂದೆ ಪ್ರಕಟವಾದ ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಅನೇಕ ದಾನ ಶಾಸನಗಳು ಹೊಯಿಸಳ ಕರ್ನಾಟಕದ ಮನೆತನಗಳಲ್ಲಿ ಈಗಲೂ ಕಾಣಬರುತ್ತವೆ. ಈ ಗುಂಪಿನ ಜನರಲ್ಲಿ ಅನೇಕ ವಿದ್ವಾಂಸರು ಪ್ರಸಿದ್ಧ ವೈದ್ಯರು, ಪರಿಣತರಾದ ಸಂಗೀತಗಾರರೂ, ವಾದ್ಯ ನಿಪುಣರೂ ಇದ್ದರು. ಈ ಬಗ್ಗೆ ಚಾರಿತ್ರಿಕವಾಗಿ ಯಾವ ದಾಖಲೆಯೂ ಆಗದೆ ಎಲ್ಲಾ ಕತ್ತಲೆಯಲ್ಲಿ ಮುಳುಗಿಹೋಗಿದೆ. ಸಂಶೋಧನೆ ಮಾಡಿದರೆ ಅನೇಕ ವಿಷಯಗಳು ದೊರೆಯುತ್ತವೆ. ನಾನು ಈ ಬಗ್ಗೆ ಕೆಲವು ವಿವರಗಳನ್ನು ಶ್ರೀ ಸತ್ಯನಾರಾಯಣ ಅವರಿಗೆ ನೀಡಿದೆ. ಅವರು "ಈಗಲಾದರೂ ನಮಗೆ ದೊರಕುವಷ್ಟು ವಿವರಗಳನ್ನು ಸಂಗ್ರಹಿಸಿ ವಿವಿಧ ವಿದ್ವಾಂಸರ, ಸಂಗೀತಗಾರರ, ವೈದ್ಯರ, ಪುರಾಣಿಕರ, ಪ್ರವಚನಕಾರರ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸೋಣ. ಮುಂದೆ ಸಂಶೋಧನೆಗಳಿಂದ ಹೆಚ್ಚು ವಿವರಗಳು ದೊರಕಿದರೆ ಅದನ್ನು ಪ್ರಕಟಮಾಡೋಣ. ಇಂಥ ಕೆಲಸಕ್ಕೆ ನಾನು ಒಂದು ಲಕ್ಷ ರೂಪಾಯಿಗಳ

ಒಂದು ದತ್ತಿಯನ್ನು ನೀಡುತ್ತೇನೆ. 'ಹೊಯ್ಸಳ ಮಾಲೆ' ಎಂಬ ಹೆಸರಿನಲ್ಲಿ ಈ ಪುಸ್ತಕಗಳು ಪ್ರಕಟವಾಗಲಿ. ನೀವು ಈ ಮಾಲೆಯ ಪ್ರಧಾನ ಸಂಪಾದಕರಾಗಿ ಕಾರ್ಯವನ್ನು ನಡೆಸಿಕೊಡಬೇಕು" ಎಂದು ನಿರ್ಧಾರವನ್ನು ಹೇಳಿಬಿಟ್ಟರು. ಈ ಕೆಲಸಕ್ಕಾಗಿ ಕೂಡಲೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಬಿಟ್ಟರು. ಆ ಮಂಡಲಿಯ ಸ್ವರೂಪ ಹೀಗಿತ್ತು:

1. ಪ್ರೊ. ಜಿ .ವೆಂಕಟಸುಬ್ಬಯ್ಯ, ಪ್ರಧಾನ ಸಂಪಾದಕರು
2. ಶ್ರೀ ಗರುಡನಗಿರಿ ನಾಗರಾಜ, ಸದಸ್ಯರು
3. ಶ್ರೀ ಬಿ.ಜೆ .ಶ್ರೀರಂಗಯ್ಯ, ಸದಸ್ಯರು
4. ಶ್ರೀ ಬಿ.ಎನ್.ಅನಂತನಾರಾಯಣ, ಸದಸ್ಯರು
5. ಶ್ರೀಮತಿ ಶಾರದಾ ಶಾಮಣ್ಣ , ಸದಸ್ಯರು
6. ಶ್ರೀ. ಎಂ.ವಿ.ಸತ್ಯನಾರಾಯಣ, ಸಂಚಾಲಕರು

ಈ ಸಭೆಯು ಸೇರಿ ಒಂದು ಕಾರ್ಯಕ್ರಮವನ್ನು ನಿರ್ಧಾರ ಮಾಡಿದೆ.

ಮೊದಲಿಗೆ ಕಿಂಚಿತ್ ಪೂರ್ವದಲ್ಲಿ ಬದುಕಿದ್ದ ಹಿರಿಯರಲ್ಲಿ ಹತ್ತು ಜನರನ್ನು ಗುರುತಿಸಿ ಅವರ ಬಗ್ಗೆ ತಿಳಿವಳಿಕೆಯುಳ್ಳವರಿಂದ 1/8 ಡೆಮ್ಮಿ, 64 ಪುಟಗಳ ಪುಸ್ತಕಗಳನ್ನು ಬರೆಯಿಸಬೇಕು. ಹೀಗೆ ಈ ಮಾಲೆಗೆ ಪುಸ್ತಕಗಳನ್ನು ರಚಿಸುವವರು ತಮ್ಮ ಬರವಣಿಗೆಯಲ್ಲಿ ಸತ್ಯಕ್ಕೆ ಅಪಚಾರವಾಗದ ಹಾಗೆ, ಯಾವ ವಿರೋಧವನ್ನೂ ಸೃಷ್ಟಿಸಿದ ಹಾಗೆ, ಯಾವ ಅನುಮಾನಗಳಿಗೂ ಅವಮಾನಗಳಿಗೂ ಅವಕಾಶವಾಗದ ಹಾಗೆ, ಅತಿ ಉತ್ಪ್ರೇಕ್ಷೆಯಾಗಲಿ, ಅತಿ ಸಂಕೋಚ ಪ್ರವೃತ್ತಿಯಾಗಲಿ ಇರದಂತೆ ಬರೆಯಬೇಕು. ಅತ್ಯುಕ್ತಿಯು ಓದುಗರಿಗೆ ಬೇಸರವನ್ನುಂಟುಮಾಡುತ್ತದೆ. ಅತಿ ಸಂಕೋಚ ವ್ಯಕ್ತಿಗೆ ಅಪಚಾರವಾಗುತ್ತದೆ. ಆದುದರಿಂದ ಬರವಣಿಗೆಯು ಸುವರ್ಣ ಮಧ್ಯಮದಲ್ಲಿ ಪ್ರಸನ್ನತೆಯನ್ನು ಗಾಂಭೀರ್ಯವನ್ನು ಉಂಟುಮಾಡುವಂತೆ ನೋಡಿಕೊಳ್ಳಬೇಕೆಂದು ಬರಹಗಾರರಿಗೆ ತಿಳಿಸಬೇಕು. ವ್ಯಕ್ತಿಗಳ ಸಾಧನೆಯನ್ನು ಹಿರಿಮೆಯನ್ನು ಎತ್ತಿ ತೋರಿಸಬೇಕು ಎಂದು ತೀರ್ಮಾನಿಸಲಾಯಿತು.

ಇಷ್ಟೆಲ್ಲಾ ಪೂರ್ವ ಸಿದ್ಧತೆಯಿಂದ ಈಗ ಪ್ರಕಟವಾಗಿರುವ ಪುಸ್ತಕಗಳು ರಚಿತವಾಗಿವೆ. ಇವು ಹೊಯ್ಸಳ ಕರ್ನಾಟಕ ಯುವಕ ಯುವತಿಯರ ಭವಿಷ್ಯಕ್ಕೆ ಮಾರ್ಗದರ್ಶಕವಾಗಬೇಕು. ಇತರ ಉದಯೋನ್ಮುಖರಿಗೂ ಆಸಕ್ತಿಯನ್ನು ಕೆರಳಿಸುವಂತಿರಬೇಕು. ಈ ಪುಸ್ತಕಗಳನ್ನು ಓದುವವರು ಇವುಗಳ ಪ್ರಕಟಣೆಯಲ್ಲಿ ಏನಾದರೂ ವಿಶೇಷ ವಿಷಯಗಳು ಇರಬೇಕೆಂದು ಬಯಸಿದರೆ ಆ ವಿವರಗಳನ್ನು ನಮಗೆ ತಿಳಿಸಿದರೆ ಅಂಥ ಎಲ್ಲ ಸಲಹೆಗಳಿಗೂ ಸ್ವಾಗತವಿದೆ ಎಂದು ಹೇಳಬಯಸುತ್ತೇವೆ.

'ಹೊಯ್ಸಳ ಮಾಲೆ' ಗೆ ಪುಸ್ತಕಗಳನ್ನು ರಚಿಸಿದವರಿಗೆಲ್ಲಾ ನಮ್ಮ ವಂದನೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಣಕ್ಕೆ ಸಿದ್ಧಮಾಡುತ್ತಿದ್ದಾಗ ನನ್ನ ಪುಸ್ತಕ ಭಂಡಾರದಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡಿರುವ ವಿವರಗಳನ್ನು ಹುಡುಕಿ ಸಮಯಕ್ಕೆ ಸರಿಯಾಗಿ ನನಗೆ ಸಹಾಯ ಮಾಡಿದ ನನ್ನ ಕಿರಿಯ ಮಗ ಚಿ॥ ಜಿ.ವಿ.ಅರುಣನಿಗೆ ಶುಭವನ್ನು ಕೋರುತ್ತೇನೆ.

ಹೊಯಿಸಳ ಕರ್ನಾಟಕ ಬಂಧುಗಳು ಈ ಮಾಲೆಗೆ ಎಲ್ಲ ಬೆಂಬಲವನ್ನು ನೀಡಿ, ಈ ಮಾಲೆ ನೂರನ್ನು ದಾಟಲಿ ಎಂದು ಹರಸಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಜಿ.ವೆಂಕಟಸುಬ್ಬಯ್ಯ
ಸಂಪಾದಕ ಮಂಡಲಿಯ ಪರವಾಗಿ

ನಂ. 58, 31 ನೇ ಕ್ರಾಸ್
7 ನೇ ಬ್ಲಾಕ್, ಜಯನಗರ
ಬೆಂಗಳೂರು-560 070.
1-3-2008

ಕೃತಜ್ಞತೆಗಳು

ಈ ಪುಸ್ತಕದ ಸಿದ್ಧತೆಗೆ ನನ್ನೊಡನೆ ನನ್ನ ಅಕ್ಕಂದಿರಾದ ಶ್ರೀಮತಿ ಸಿ.ಆರ್.ಲೀಲಾ ಹಾಗೂ ಶ್ರೀಮತಿ ಸುಶೀಲ ಕೃಷ್ಣಮೂರ್ತಿ ಮತ್ತು ನನ್ನ ಪತ್ನಿ ಶ್ರೀಮತಿ ಶ್ಯಾಮಲಾ ಸತ್ಯ ಅನೇಕ ರೀತಿಯಲ್ಲಿ ಶ್ರಮಿಸಿದ್ದಾರೆ. ಅವರಿಗೆ ನನ್ನ ವಂದನೆಗಳು.

ನನ್ನ ಯೋಗ್ಯತೆಗೂ ಮೀರಿ ಕೃಷ್ಣಶಾಸ್ತ್ರಿಗಳಂತಹ ಹಿರಿಯ ವ್ಯಕ್ತಿಯ ಬಗ್ಗೆ ಬರೆಯಲು ನನಗೆ ಅವಕಾಶ ದೊರಕಿಸಿದ ಹೊಯ್ಸಳ ಕರ್ನಾಟಕ ಮಾಲೆಯ ಪ್ರಧಾನ ಸಂಪಾದಕರಾದ ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ, ಸಂಚಾಲಕರಾದ ಶ್ರೀ ಎಂ.ವಿ. ಸತ್ಯನಾರಾಯಣ, ಅಧ್ಯಕ್ಷರಾದ ಶ್ರೀ ಅರಕೆರೆ ಗೌರೀಶಂಕರ್ ಹಾಗೂ ಹೊಯ್ಸಳ ಕರ್ನಾಟಕ ಸಂಘ, ಬೆಂಗಳೂರಿನ ಕಾರ್ಯಕಾರಿ ಸಮಿತಿಯ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸಿ.ಆರ್.ಸತ್ಯ


ಡಾ. ಎ.ಆರ್. ಕೃಷ್ಣಶಾಸ್ತ್ರೀ

ಸ್ಮರಣೆ

ಕನ್ನಡ ಭಾಷೆಯ ಉಳಿವು ಹಾಗೂ ಅಭ್ಯುದಯದ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬ ಕನ್ನಡಿಗನ ಮನದಲ್ಲಿ ಇರುವ ಚಿರಸ್ಮರಣೀಯ ವ್ಯಕ್ತಿ: ಡಾ.ಎ.ಆರ್. ಕೃಷ್ಣಶಾಸ್ತ್ರಿಗಳು. ಕನ್ನಡವೇ ಅಳಿಸಿ ಹೋಗುವುದೇನೋ ಎಂಬ ಶಂಕೆಯಲ್ಲಿದ್ದ ಸ್ಥಿತಿಯಲ್ಲಿ ಕನ್ನಡ ಸೇನಾನಿ ಎಂದು ಕರೆಸಿಕೊಂಡ ಶಾಸ್ತ್ರಿಗಳು ಕನ್ನಡ ಸೇನೆಯನ್ನೇ ಕಟ್ಟಲು ಶಿಷ್ಯ ಕೋಟಿಯನ್ನೇ ತಯಾರಿಸಿ, ಅದರಿಂದ ನಾಡು ನುಡಿಗೆ ಸೇವೆ ಸಲ್ಲುವಂತೆ ಪ್ರೋತ್ಸಾಹಿಸಿದ್ದೇ ಅಲ್ಲದೆ ತಮ್ಮ ಬರಹಗಳ ಮೂಲಕ ಮಾರ್ಗದರ್ಶಕರಾಗಿ ನಿಂತು ಕನ್ನಡಕ್ಕಾಗಿ ಹೋರಾಡಿದರು. ರಾಷ್ಟ್ರಕವಿ ಕುವೆಂಪು ಹೇಳಿದಂತೆ ಶ್ರೀ ಕೃಷ್ಣಶಾಸ್ತ್ರಿಗಳ ನೆನಪೇ ಒಂದು ಪೂಜ್ಯವಸ್ತು. ಅವರು ಇಂದು ದೇಹ ಚಕ್ಷುವಿಗೆ ಅಗಮ್ಯವಾಗಿದ್ದಾರೆ. ಆದರೆ ಹೃದಯ ಚಕ್ಷುವಿಗೆ ಅವರ ನೆನಪು ಸದಾ ನಮ್ಮನ್ನು ಎಚ್ಚರಿಸುತ್ತಿರಲಿ.

ಜನನ, ಬಾಲ್ಯ

ವಿರೋಧಿ ಸಂವತ್ಸರದ ಮಾಘ ಬಹುಳ ಸಪ್ತಮಿ ಬುಧವಾರ 1890 ಫೆಬ್ರವರಿ 12 ನೇ ತಾರೀಖು ಶುದ್ಧ ವೈದಿಕ ವಿಶ್ವಾಮಿತ್ರ ಗೋತ್ರದ ಮನೆತನದಲ್ಲಿ ಶಾಸ್ತ್ರಿಗಳು ಜನಿಸಿದರು. ತಂದೆ ಅಂಬಳೆ ರಾಮಕೃಷ್ಣಶಾಸ್ತ್ರಿಗಳು, ತಾಯಿ ಶ್ರೀಮತಿ ಶಂಕರಮ್ಮ. ಅಂಬಳೆ ರಾಮಕೃಷ್ಣಶಾಸ್ತ್ರಿಗಳು ಚೆನ್ನಾಗಿ ಸಂಸ್ಕೃತ ವ್ಯಾಸಂಗ ಮಾಡಿದ್ದರು. ಮೈಸೂರಿನ ಸಂಸ್ಕೃತ ಪಾಠಶಾಲೆಯಲ್ಲಿ ವ್ಯಾಕರಣ ವಿದ್ವಾಂಸರಾಗಿ ಕೆಲಸದಲ್ಲಿ ಇದ್ದರು. ಅವರಿಗೆ ತಿಂಗಳಿಗೆ 18 ರೂ. ಸಂಬಳ ಬರುತ್ತಿತ್ತು. ಬಡವರಾದರೂ ಮಗನಿಗೆ ದೇವತಾ ಪೂಜೆ, ದಿನನಿತ್ಯದ ಕೆಲಸಗಳಲ್ಲಿ ಅಚ್ಚುಕಟ್ಟು ಮತ್ತು ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುವ ರೀತಿ ಇವುಗಳನ್ನು ಕಲಿಸಿಕೊಟ್ಟರು. ಕೃಷ್ಣನಿಗೆ ಒಂಬತ್ತು ವಯಸ್ಸು ತುಂಬಿದಾಗ ತಾಯಿ ಶಂಕರಮ್ಮನವರು ವಿಷಮಶೀತ



ಡಾ॥ ಎ.ಆರ್.ಕೃಷ್ಣಶಾಸ್ತ್ರಿಯವರು



ಕೆಲಸಕ್ಕೆ ಸೇರಿದ ಹೊಸತರಲ್ಲಿ ಶ್ರೀ ಕೃಷ್ಣಶಾಸ್ತ್ರಿಯವರು

ಜ್ವರದಿಂದ ತೀರಿಕೊಂಡರು. ಮನೆಯಲ್ಲಿದ್ದ ವಯಸ್ಸಾದ ಅಜ್ಜಿ, ತಂದೆ, ಮಕ್ಕಳಾದ ಕೃಷ್ಣ ಮತ್ತು ಕೃಷ್ಣನ ತಮ್ಮ ಇವರುಗಳನ್ನೊಳಗೊಂಡ ಸಂಸಾರದ ದಿನನಿತ್ಯ ಕಾರ್ಯಗಳನ್ನೆಲ್ಲಾ ರಾಮಕೃಷ್ಣಶಾಸ್ತ್ರಿಗಳೇ ನಿರ್ವಹಿಸುತ್ತಿದ್ದರು. ಕೃಷ್ಣ ಸಹ ತಂದೆಗೆ ಅಡಿಗೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದ.

ರಾಮಕೃಷ್ಣಶಾಸ್ತ್ರಿಗಳು ಮಗನಿಗೆ ಸಂಸ್ಕೃತ ಪಾಠವನ್ನು ಬಾಲ್ಯದಲ್ಲೇ ಕಲಿಸಲು ಆರಂಭಿಸಿದರು. ಅವನನ್ನು ಮೈಸೂರಿನ ಸಂಸ್ಕೃತ ಪಾಠಶಾಲೆಗೆ ಸೇರಿಸಿದರು. ಪಾಲ್‌ಘಾಟ್ ನಾರಾಯಣಶಾಸ್ತ್ರಿ ಎಂಬುವರು ಆಗ ವೇದಾಂತ ಪಾಠವನ್ನು ಹೇಳುತ್ತಿದ್ದರು. ಕೃಷ್ಣನಿಗೆ ಎಳೆವಯಸ್ಸಿನಲ್ಲೇ ವೇದ ಪಾಠವೂ ನಡೆಯಿತು. ಈ ರೀತಿಯ ಶಿಕ್ಷಣದಿಂದ ಹುಡುಗನಿಗೆ ಒಳ್ಳೆಯ ಆರೋಗ್ಯ, ದೈವ ಭಕ್ತಿ, ಗುರುಹಿರಿಯರಲ್ಲಿ ಒಳ್ಳೆಯ ನಡವಳಿಕೆ ಮತ್ತು ಸಾಹಿತ್ಯದ ಬಗ್ಗೆ ಒಲವು ತಾನಾಗಿಯೇ ಲಭಿಸಿದವು. ಎಳೆಯ ಮನಸ್ಸಿಗೆ ಬಂದ ಈ ಗುಣಗಳೆಲ್ಲವೂ ಆತನಿಗೆ ಕಡೆಯವರೆಗೂ ಅಳಿಯಲಿಲ್ಲ.

ವಿದ್ಯಾಭ್ಯಾಸ

ತಂದೆ ಅಷ್ಟೇನೂ ಸಿರಿವಂತರಲ್ಲದ್ದರಿಂದ ಶಾಸ್ತ್ರಿಗಳು ವಿದ್ಯಾಭ್ಯಾಸವನ್ನು ಸಾಧಾರಣ ಸ್ಕೂಲುಗಳಲ್ಲೇ ಕಲಿಯಬೇಕಾಯಿತು. ಮತ್ತು ಅವರು ಅದಕ್ಕೆ ಹೆಚ್ಚಾಗಿ ಚಿಂತಿಸಲೂ ಅವಕಾಶವಿರಲಿಲ್ಲ. ಬಾಲ್ಯದಲ್ಲಿಯೇ ಆರಂಭಮಾಡಿದ ಸಂಸ್ಕೃತ ಪರೀಕ್ಷೆಯಲ್ಲಿ ಮೊದಲನೆಯ ಶ್ರೇಣಿಯಲ್ಲಿಯೇ ಉತ್ತೀರ್ಣರಾದರು. ನಂತರ ಅವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳ ಪಾಠಗಳನ್ನು ರಾಯಲ್ ಸ್ಕೂಲಿನಲ್ಲಿ (ಈಗಿನ ಮಹಾರಾಜ ಕಾಲೇಜಿನ ಕಟ್ಟಡದಲ್ಲಿ ರಾಜಮನೆತನದವರು ನಡೆಸುತ್ತಿದ್ದ ಸ್ಕೂಲು) ಕಲಿತರು. ಅಲ್ಲಿಯೂ ಅವರು ಮೊದಲ ಶ್ರೇಣಿಯಲ್ಲೇ ಉತ್ತೀರ್ಣರಾಗಿ ಮುಂದೆ ತಮ್ಮ ಪ್ರೌಢ ವಿದ್ಯಾಭ್ಯಾಸವನ್ನು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಮುಂದುವರೆಸಿದರು. ಆಗ ಅವರು ವಿಜ್ಞಾನ ಮತ್ತು ಗಣಿತವನ್ನೇ ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಿದ್ದರು. ಇಲ್ಲೂ ಅವರಿಗೆ ಅನೇಕ ಬಹುಮಾನಗಳು ಬಂದಿದ್ದವು. ಒಂದು ಸಲ ಅವರಿಗೆ ಒಂದು ಬೈಬಲ್‌ನ

ಪ್ರತಿ ಬಹುಮಾನವಾಗಿ ಬಂತು. ಅವರು ಅದನ್ನು ಸಮಗ್ರವಾಗಿ ಓದಿದರು. ಮತ್ತೊಂದು ಸಲ ಅವರಿಗೆ ಎರಡು ರೂ. ಬಹುಮಾನವಾಗಿ ಬಂತು. ಆಗ ಅವರಿಗೆ ಬಹಳ ಸಂತೋಷವಾಯಿತು. ತಾವು ಅದರಲ್ಲಿ ಬಂಕಿಮಚಂದ್ರರ ಕನ್ನಡ ಅನುವಾದ 'ಆನಂದ ಮಠ' ಪುಸ್ತಕವನ್ನು ಕೊಂಡೆನೆಂದು ಹೇಳುತ್ತಿದ್ದರು. ಬಂಕಿಮರ ಬಗ್ಗೆ ಒಲವು ಚಿಕ್ಕವಯಸ್ಸಿನಿಂದಲೇ ಮೂಡಿ ಬಂದಿತ್ತು. ಹೀಗೆ ತಮಗೆ ಬಹುಮಾನವಾಗಿ ಬಂದ ಹಣದಲ್ಲಿ ಮುಂದೆ ಬಂಕಿಮರ ವಿಷವೃಕ್ಷ, ಆಳಸಿಂಗರಾಚಾರ್ಯರ ರಾಮಾಯಣ, ಮಹಾಭಾರತ ಮತ್ತು ಭಾಗವತ ಪುಸ್ತಕಗಳನ್ನು ಕೊಂಡಿದ್ದರು. ಇತ್ತೀಚೆಗೂ ವೆಸ್ಲಿಯನ್ ಮಿಷನ್ ಸ್ಕೂಲಿನ ಬಹುಮಾನ ಚೀಟಿಯನ್ನು ಆ ಪುಸ್ತಕಗಳಿಗೆ ಅಂಟಿಸಿರುವುದನ್ನು ನೋಡಿದ್ದೆವು.

ಇಷ್ಟರಲ್ಲಿ ಅವರ ತಮ್ಮನನ್ನು ಸ್ಕೂಲಿಗೆ ಸೇರಿಸಿದ್ದರು. ಮನೆಯಲ್ಲಿ ಅವರ ಅಜ್ಜಿ ಹಾಸಿಗೆ ಹಿಡಿದು ಮಲಗಿದ್ದರು. ಎಲ್ಲಾ ಖರ್ಚು ತಂದೆಯವರ ಕಡಿಮೆ ಸಂಬಳದಲ್ಲೇ ನಡೆಯಬೇಕಿತ್ತು. ಆದರಿಂದ ಶಾಸ್ತ್ರಿಗಳಿಗೆ ಬೆಂಗಳೂರಿಗೆ ಹೋಗಿ ವಿಜ್ಞಾನ ವಿಷಯಗಳ ಬಗ್ಗೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಆಗಲಿಲ್ಲ.

ಆ ಕಾಲದಲ್ಲಿ ಮೈಸೂರಿನಲ್ಲಿ ವಿಜ್ಞಾನದ ವಿಷಯಗಳನ್ನು ಓದಲು ಅವಕಾಶವಿಲ್ಲದೇ ಇದ್ದುದರಿಂದ ಮೈಸೂರು ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಭಾಷೆಗಳನ್ನು ತೆಗೆದುಕೊಂಡು ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಬಿ.ಎ. ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ 1913 ರಲ್ಲಿ ಉತ್ತೀರ್ಣರಾದರು. ಅಲ್ಲಿಯೇ ಆಗ ಅಧ್ಯಾಪಕರಾಗಿದ್ದ ಬಿ.ಎಂ.ಶ್ರೀಕಂಠಯ್ಯ, ಎಂ.ಹಿರಿಯಣ್ಣ ಮತ್ತು ಕಾನಕಾನಹಳ್ಳಿ ವರದಾಚಾರ್ಯ ಮುಂತಾದವರುಗಳ ಪ್ರಭಾವಕ್ಕೆ ಒಳಗಾದರು. ಬಿ.ಎಂ.ಶ್ರೀಕಂಠಯ್ಯನವರು ಇವರಿಗೆ ಕನ್ನಡ ಸಾಹಿತ್ಯದ ಇತಿ ಮಿತಿಗಳನ್ನೂ ಕನ್ನಡ ನಾಡು, ನುಡಿಯ ಬಗ್ಗೆ ಮಾಡಬೇಕಾದ ಕೆಲಸವನ್ನೂ ತೋರಿಸಿದರು. ಇಂತಹ ಹಿರಿಯರಿಂದ ಓದಲು ಪ್ರೋತ್ಸಾಹ ದೊರಕಿತ್ತಲ್ಲದೆ ಅವರ ನೆರಳಿನಲ್ಲಿ ಹೆಚ್ಚು ಹೆಚ್ಚು ಕಲಿಯಲು, ಕೆಲಸ ಮಾಡಲು ಕೃಷ್ಣಶಾಸ್ತ್ರಿಗಳಿಗೆ ಅವಕಾಶ ದೊರೆಯಿತು. ತಮ್ಮೆಲ್ಲ ಕಷ್ಟಗಳನ್ನೂ ಬವಣೆಯನ್ನೂ ಇಂತಹ

ಪೂಜ್ಯರ ಸಹವಾಸದಿಂದ ಮರೆತು ಅವರ ಜೊತೆಯಲ್ಲಿ ಕನ್ನಡಕ್ಕಾಗಿ ಕೆಲಸ ಮಾಡಲು ಪ್ರಾರಂಭಿಸಿದರು. ಅವರಿಗೆ ಆಗ ಕನ್ನಡ ಎಂ.ಎ ಪರೀಕ್ಷೆಯನ್ನು ಮಾಡಬೇಕೆಂದೆನಿಸಿತು. ಮೈಸೂರಿನಲ್ಲಿ ಆಗ ಕನ್ನಡ ಎಂ.ಎ. ಮಾಡಲು ಅವಕಾಶವಿರಲಿಲ್ಲ. ಆದ್ದರಿಂದ ಶಾಸ್ತ್ರಿಗಳು ಮದರಾಸಿಗೆ ತಮ್ಮ ಸ್ವಂತ ಖರ್ಚಿನಿಂದ ಒಂದು ವರ್ಷ ಹೋಗಿ ಕನ್ನಡ ಎಂ.ಎ.ಪರೀಕ್ಷೆಯನ್ನು ಮಾಡಿದರು. ಶಾಸ್ತ್ರಿಗಳು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಅಂಬಳೆ ರಾಮಕೃಷ್ಣಶಾಸ್ತ್ರಿಗಳು ತರೀಕೆರೆಯ ಶ್ರೀ ರಾಮರಾಯರಪುತ್ರಿ ಲಕ್ಷ್ಮಿದೇವಮ್ಮನನ್ನು ಇವರಿಗೆ ವಧುವಾಗಿ ಆರಿಸಿ ಬಂದಿದ್ದರು. ಮದುವೆಯಲ್ಲಿ ಕೃಷ್ಣಶಾಸ್ತ್ರಿಗಳಿಗೆ 16 ವರ್ಷ, ಅವರ ಹೆಂಡತಿಗೆ 12 ವರ್ಷ. ಆಗಿನ ಕಾಲದಲ್ಲಿ ಮದುವೆಯಲ್ಲೇ ವಧು ವರರು ಪರಸ್ಪರವಾಗಿ ನೋಡುತ್ತಿದ್ದುದು. ಈ ದಾಂಪತ್ಯದಿಂದ ಅವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು, ಒಬ್ಬನೇ ಮಗ ಜನಿಸಿದರು. ಗಂಡು ಮಗು ಹುಟ್ಟಿದ ಎರಡು ವರ್ಷದಲ್ಲೇ ಪಿತ್ತಕೋಶದ ಖಾಯಿಲೆಯಿಂದ ನರಳಿ ಕಣ್ಣು ಮುಚ್ಚಿಕೊಂಡಿತು. ಪುನ: ಅವರಿಗೆ ಗಂಡು ಸಂತಾನವಾಗಲಿಲ್ಲ. ಈ ಕೊರತೆ ಅವರಿಗೆ ಸಾಯುವವರೆಗೂ ಇತ್ತು. ಅವರ ಮೂರನೆಯ ಮಗಳು ಕಮಲಾ, ಅವರಿಗೆ 56 ವರ್ಷವಾಗಿದ್ದಾಗ ತೀರಿಕೊಂಡಳು. ಇದಂತೂ ಅವರಿಗೆ ಭರಿಸಲಾಗದ ವೇದನೆಯಾಯಿತು.

ಅಧ್ಯಾಪಕ ವೃತ್ತಿ

ಕೃಷ್ಣಶಾಸ್ತ್ರಿಗಳು ಎಂ.ಎ.ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಆ ಕಾಲದಲ್ಲೇ ಅವರಿಗೆ ಅಧ್ಯಾಪಕ ವೃತ್ತಿ ತಕ್ಷಣ ಸಿಗಲಿಲ್ಲ. ಮನೆಯಲ್ಲಿ ಹೆಂಡತಿ, ತಮ್ಮ ಸಂಸಾರದ ಖರ್ಚು, ಬಡತನದಿಂದ ಕಷ್ಟಪಟ್ಟಿದ್ದ ಕಾರಣ 1915 ರಲ್ಲಿ ಮೈಸೂರು ಅಠಾರ ಕಛೇರಿಯಲ್ಲಿ ಗುಮಾಸ್ತೆಯಾಗಿ ಕೆಲಸ ಸಿಕ್ಕಿದ ಕೂಡಲೇ ಸೇರಿದರು. ಆಗ ಉದ್ಯೋಗದಲ್ಲಿದ್ದ ಇತರ ಗುಮಾಸ್ತರಿಗೆ ಎಂ.ಎ.ಪಾಸು ಮಾಡಿದಾತ ಗುಮಾಸ್ತೆಯಾಗಿ ಕೆಲಸಕ್ಕೆ ಸೇರುವುದೆಂದರೆ ಆಶ್ಚರ್ಯದ ಮಾತು. ಅಲ್ಲದೆ ಈ ಹೊಸ ಗುಮಾಸ್ತನನ್ನು ರೂ. 30–01–45 ರ ಗ್ರೇಡ್ ನಲ್ಲಿ ರೂ.35 ಸಂಬಳ ತಿಂಗಳಿಗೆ ಎಂದು ಗೊತ್ತು ಮಾಡಿದ್ದು ಇನ್ನೂ ಹೆಚ್ಚಿನ

ಆಶ್ಚರ್ಯದ ಸಂಗತಿಯಾಗಿತ್ತು. ಅವರು ಹೆಚ್ಚು ದಿವಸ ಈ ಕೆಲಸದಲ್ಲಿ ಇರಲಿಲ್ಲ. ಬಿ.ಎಂ.ಶ್ರೀಕಂಠಯ್ಯನವರ ಪ್ರೋತ್ಸಾಹದಿಂದಲೂ, ಆಗಿನ ಕಾಲದಲ್ಲಿದ್ದ ವಿದ್ಯಾ ಇಲಾಖೆಯ ಅಧಿಕಾರಿಗಳ ಬೆಂಬಲದಿಂದಲೂ ಬೆಂಗಳೂರಿನಲ್ಲಿ ಕನ್ನಡ ಟ್ಯೂಟರ್ ಆಗಿ ತಿಂಗಳಿಗೆ ರೂ.50 ಸಂಬಳದಲ್ಲಿ ನೇಮಕಗೊಂಡರು. ಇದು 50 ವರ್ಷಗಳ ಹಿಂದಿನ ಮಾತು. ಆ ಕಾಲದಲ್ಲಿ ಜನರು ಇಂಗ್ಲಿಷ್ ವಿದ್ಯಾಭ್ಯಾಸದಿಂದ ಪ್ರಭಾವಿತರಾಗಿ ಕನ್ನಡದಲ್ಲಿ ಮಾತನಾಡುವುದು, ಪಾಠಗಳನ್ನು ಕಲಿಯುವುದು ತಮ್ಮ ಅಂತಸ್ತಿಗೆ ಕೀಳು ಎಂದು ಭಾವಿಸಿದ್ದರು. ವಿದ್ಯಾರ್ಥಿಗಳಿಗೂ ಕಾಲೇಜಿನಲ್ಲಿ ಕನ್ನಡ ಕಲಿಯುವುದೆಂದರೆ ಬೇಜಾರು, ಅವಮಾನ ಎಂಬುವ ಭಾವನೆ ಬಂದು ಬಿಟ್ಟಿತ್ತು. ಅಲ್ಲದೆ ಆಗ ಕನ್ನಡ ಪಾಠ ಹೇಳುತ್ತಿದ್ದವರು ಕನ್ನಡ ಪಂಡಿತರು. ಅವರಿಗೆ ಸಾಮಾನ್ಯವಾಗಿ ಇಂಗ್ಲಿಷ್, ಸಂಸ್ಕೃತ ಭಾಷೆಗಳಲ್ಲಿ ಆಳವಾದ ಪಾಂಡಿತ್ಯವಿರಲಿಲ್ಲ. ಇಂಗ್ಲಿಷ್ ಪ್ರೇಮಿ ವಿದ್ಯಾರ್ಥಿಗಳು ಕನ್ನಡ ಉಪಾಧ್ಯಾಯರನ್ನು ಗೇಲಿ ಮಾಡಿ, ಇವರಿಗೆ ಏನೂ ಗೊತ್ತಿಲ್ಲ ಎಂಬ ತಿರಸ್ಕಾರ ಭಾವನೆಯನ್ನು ಹೊಂದಿದ್ದ ಕಾಲ. ಇಂತಹ ಪರಿಸ್ಥಿತಿಯಲ್ಲಿ ಶಾಸ್ತ್ರಿಗಳು ಇಂಗ್ಲಿಷ್ ಮೇಷ್ಟರಂತೆ ಪೋಷಾಕು ಧರಿಸಿ, ಚೆನ್ನಾಗಿ ಪಾಠ ಹೇಳಿ, ಕನ್ನಡ ಸೊಗಸಾದ ಭಾಷೆ, ಕನ್ನಡದಲ್ಲೂ ಕಲಿಯುವುದು ಬಹಳ ಇದೆ ಎಂಬುದನ್ನು ತಾವು ಅಧ್ಯಾಪಕರಾದ ಸ್ವಲ್ಪ ಅವಧಿಯಲ್ಲೇ ತೋರಿಸಿಕೊಟ್ಟರು.

ಆಗ ಮದರಾಸ್ ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ.ಪ್ರಬಂಧ ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್ ಪಠ್ಯಪುಸ್ತಕದ ಮೇಲೆ ಒಂದು ಪ್ರಶ್ನೆ ಬರುತ್ತಿತ್ತು. ಇಂಗ್ಲಿಷ್ ಅಧ್ಯಾಪಕರುಗಳು ಕನ್ನಡ ವಿದ್ಯಾರ್ಥಿಗಳಿಗಾಗಿ ಆ ಪಾಠವನ್ನು ಮಾಡುತ್ತಿರಲಿಲ್ಲ. ಕೃಷ್ಣಶಾಸ್ತ್ರಿಗಳು ಈ ಇಂಗ್ಲಿಷ್ ಪಠ್ಯಪುಸ್ತಕವನ್ನು ಕನ್ನಡದ ತರಗತಿಯವರಿಗೆ ಪಾಠ ಹೇಳಿದರು. ಪರೀಕ್ಷೆಗೆ ಉಪಯೋಗವಾಗುತ್ತಿದ್ದರಿಂದ ಎಲ್ಲಾ ವಿದ್ಯಾರ್ಥಿಗಳೂ ಅದನ್ನು ಮೆಚ್ಚಿದರು.

ಶಾಸ್ತ್ರಿಗಳಿಗೆ ಶಿಷ್ಯರಲ್ಲಿದ್ದ ವಾತ್ಸಲ್ಯ ಅಳೆಯಲು ಅಸಾಧ್ಯ. ಅವರಲ್ಲಿದ್ದ ಪ್ರತಿಭೆ, ಪಾಂಡಿತ್ಯವನ್ನು ಗುರುತಿಸಿ, ಅವರು ಮುಂದೆ ಬರಲು ಸಹಾಯ ಮಾಡುತ್ತಿದ್ದರು. ತಮ್ಮ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ದೊರಕುವ ಸ್ಕಾಲರ್‌ಷಿಪ್, ಉದ್ಯೋಗ

ಅವಕಾಶ ಕಲ್ಪಿಸುತ್ತಿದ್ದರು. ತಮ್ಮ ಅಲ್ಪ ಸಂಬಳದಲ್ಲೇ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಶುಲ್ಕ ಅಥವಾ ಇನ್ನ್ಯಾವುದಾದರೂ ತುರ್ತು ಸಮಯದಲ್ಲಿ ಅವರಿಗೆ ಬೇಕಾದ ಹಣವನ್ನು ಕೊಟ್ಟು ಸಹಾಯ ಮಾಡುತ್ತಿದ್ದರು.. ಅದರಿಂದ ಉಪಕಾರ ಹೊಂದಿದ ಅನೇಕ ದೊಡ್ಡ ಮಹನೀಯರು ಈಗಲೂ ಅವರನ್ನು ಸ್ಮರಿಸುತ್ತಾರೆ. ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಕವಿ ಸಮ್ಮೇಳನ ನಡೆಯಿಸುವುದು. ಕನ್ನಡದಲ್ಲಿ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ ಮುಂತಾದುವುಗಳನ್ನು ಏರ್ಪಡಿಸಿ ಆಯಾ ವಿದ್ಯಾರ್ಥಿಗಳ ಜಾಣತನವನ್ನು ಪ್ರದರ್ಶಿಸುವುದಕ್ಕೆ ಶ್ರಮಿಸುತ್ತಿದ್ದರು. ತಮ್ಮದೇ ಆದ ಹೊಸ ಶೈಲಿಯಲ್ಲಿ, ಹೊಸ ಸಾಧನೆಗಳಿಂದ, ತಮ್ಮ ಗುರುಗಳ ಪ್ರೋತ್ಸಾಹದಿಂದ, ಸ್ನೇಹಿತರ ನೆರವಿನಿಂದ, ವಿದ್ಯಾರ್ಥಿಗಳ ಬೆಂಬಲದಿಂದ ಕನ್ನಡ ಸೇವೆಯನ್ನು ಅವರು ಆರಂಭಿಸಿದರು. ಈ ಸಮಯದಲ್ಲೇ ಅವರು 1918 ರಲ್ಲಿ ಕರ್ಣಾಟಕ ಸಂಘವನ್ನು ಕಟ್ಟಿದರು. 1919ರಲ್ಲಿ ಕನ್ನಡದ ಪತ್ರಿಕೆ ಪ್ರಬುದ್ಧ ಕರ್ಣಾಟಕ ವನ್ನು ಹೊರಡಿಸಿದರು. 1927 ರಲ್ಲಿ ಉಪಪ್ರಾಧ್ಯಾಪಕರಾಗಿಯೂ, 1939 ರಲ್ಲಿ ಮೈಸೂರಿಗೆ ಬಂದು ಕನ್ನಡ ಇಲಾಖೆಯ ಮುಖ್ಯಸ್ಥರಾಗಿಯೂ, ಪ್ರಾಧ್ಯಾಪಕರಾಗಿಯೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದರು. ತಮ್ಮ ಅಧಿಕಾರ ಅವಧಿ ಮುಗಿಯುವ ಮೊದಲೇ 1946 ರಲ್ಲಿ ವಿಶ್ರಾಂತಿ ಬಯಸಿ ಅವರು ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದರು.

ಇತರ ವಿಶ್ವವಿದ್ಯಾನಿಲಯಗಳಿಂದ ಪ್ರಾಧ್ಯಾಪಕ ಹುದ್ದೆಗೆ ಅವರಿಗೆ ಕರೆ ಬಂದಿತ್ತು. ಅವರು ಎಲ್ಲೂ ಹೋಗಲು ಮನಸ್ಸು ಮಾಡಲಿಲ್ಲ. ಉಳಿದ ತಮ್ಮ ವರ್ಷಗಳಲ್ಲಿ ಬರವಣಿಗೆಯ ಕೆಲಸ ಮಾಡಬೇಕೆಂದು ಸಂಕಲ್ಪಿಸಿದ್ದರು. ಹಾಗೆಯೇ ತಮ್ಮ ಕೈಲಾಗುವವರೆಗೂ ಅನೇಕ ಶ್ರೇಷ್ಠ ಕೃತಿಗಳನ್ನು ರಚಿಸಿದರು.


ವಿಶ್ವವಿದ್ಯಾನಿಲಯದಲ್ಲಿ ಇತರ ಅಧ್ಯಾಪಕರಿಗೆ ಕನ್ನಡ ಅಧ್ಯಾಪಕ ತಮ್ಮಷ್ಟು ಪಂಡಿತನಲ್ಲವೆಂಬ ಭಾವನೆ ಇದ್ದ ಕಾಲದಲ್ಲಿ, ಎಲ್ಲಾ ಅಧ್ಯಾಪಕರಿಗಿಂತಲೂ ಕಡಿಮೆ ಸಂಬಳ ತೆಗೆದುಕೊಳ್ಳುವ ಅಧ್ಯಾಪಕನಾಗಿಯೇ ಶಾಸ್ತ್ರಿಗಳು ತಮ್ಮ ಸಹೋದ್ಯೋಗಿಗಳಿಂದಲೂ, ವಿದ್ಯಾರ್ಥಿಗಳಿಂದಲೂ ಗೌರವವನ್ನೂ ಕೀರ್ತಿಯನ್ನೂ ಪಡೆದರು.



ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್-ಕನ್ನಡ ನಿಘಂಟು ಸಂಪಾದಕ ಸಮಿತಿ ಮತ್ತು ಸಿಬ್ಬಂದಿಯೊಡನೆ



ಹೊಸಗನ್ನಡದ ಅಶ್ವಿನಿ ದೇವತೆಗಳು



ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಕೋಶ ಸಂಪಾದಕ ಸಮಿತಿ

ಕನ್ನಡ ಕೋಶಕ್ಕೆ ಶಾಸ್ತ್ರಿಗಳು ಸಿದ್ಧಪಡಿಸಿದ ಟಿಪ್ಪಣಿಗಳ ಮಾದರಿ

ಕನ್ನಡದ ಸೇವೆ

ಶಾಸ್ತ್ರಿಗಳು ಕನ್ನಡ ನಾಡು, ನುಡಿಗೆ ಇತ್ತ ಕೊಡುಗೆಗಳು ಒಂದೇ ಎರಡೇ! ಆಗ ಕನ್ನಡ ಪಂಡಿತರನ್ನೇ ಅಲಕ್ಷಿಸುತ್ತಿದ್ದ ಕಾಲ. ವಿದ್ಯಾರ್ಥಿಗಳು ಮಿಕ್ಕ ಎಲ್ಲಾ ಕ್ಲಾಸುಗಳಿಗೂ ಹಾಜರಾಗಿ ಕನ್ನಡ ಕ್ಲಾಸನ್ನು ಮಾತ್ರ ತಪ್ಪಿಸಿಕೊಳ್ಳುತ್ತಿದ್ದರು. ಕನ್ನಡ ಸಾಹಿತ್ಯ, ನಡೆ ನುಡಿಗೆ ಆಗ ಕಾಲ ಚೆನ್ನಾಗಿರಲಿಲ್ಲ. ಆಗ ವಿಶ್ವವಿದ್ಯಾನಿಲಯದ ಮುಖ್ಯಸ್ಥರು: ಇಂಗ್ಲೆಂಡ್ ನಿಂದ ಬಂದಿದ್ದ ಇಂಗ್ಲಿಷ್ ಪ್ರೊಫೆಸರುಗಳು. ಇಂತಹ ಪರಿಸ್ಥಿತಿಯಲ್ಲಿ ಕೃಷ್ಣಶಾಸ್ತ್ರಿಗಳು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಉಪಾಧ್ಯಾಯರಾಗಿ ಕೆಲಸ ಮಾಡಿದರು. ಕನ್ನಡದ ಜನತೆಯನ್ನು, ಶಿಷ್ಯರನ್ನು ಕನ್ನಡದ ಕಡೆಗೆ ಕಣ್ಣು ಹಾಯಿಸುವಂತೆ ಕೆಲಸ ಮಾಡಿದರು, ಕನ್ನಡ ಅಭಿಮಾನಿಗಳನ್ನು ಸೇನಾನಾಯಕನಂತೆ ನಿದ್ದೆಯಿಂದ ಜಡತೆಯಿಂದ ಎಬ್ಬಿಸಿದರು. ಇದೇ ವೇಳೆ 1915 ರಲ್ಲಿ ಕನ್ನಡವನ್ನು ಬೆಳೆಸಲು ಗುರಿಯಿಟ್ಟುಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾಗಿ ಒಂದೆರಡು ವರ್ಷಗಳು ಮಾತ್ರ ಆಗಿದ್ದವು.

ಶಾಸ್ತ್ರಿಗಳ ಕನ್ನಡದ ಅಭ್ಯುದಯದ ಹೋರಾಟದಲ್ಲಿ ದೊಡ್ಡ ಮೈಲುಗಲ್ಲುಗಳು ಎಂದು ಹೇಳಬಹುದಾದ ಕೆಲವು ಉದಾಹರಣೆಗಳನ್ನು ಕೆಳಕಂಡಂತೆ ವಿವರಿಸಬಹುದು.

ಕರ್ನಾಟಕ ಸಂಘ ಸ್ಥಾಪನೆ, ಬೆಳವಣಿಗೆ

ಉಪಾಧ್ಯಾಯರಾದಮೇಲೆ ಸೆಂಟ್ರಲ್ ಕಾಲೇಜಿನಲ್ಲಿ ಎಲ್ಲಾ ಭಾಷೆಗಳಿಗೂ, ವಿಜ್ಞಾನಕ್ಕೆ ಸಂಬಂಧ ಪಟ್ಟ ಎಲ್ಲಾ ವಿಷಯಗಳಿಗೂ ಸಂಘಗಳು ಇದ್ದದ್ದನ್ನು ಕಂಡರು. ಆದರೆ ಕನ್ನಡ ಸಂಘ ಮಾತ್ರ ಇನ್ನೂ ಹುಟ್ಟಿರಲಿಲ್ಲ. ಕೃಷ್ಣಶಾಸ್ತ್ರಿಗಳಿಂದ ಪ್ರಭಾವಿತರಾದ ಕೆಲವು ವಿದ್ಯಾರ್ಥಿಗಳು, ಅಂದರೆ ಕನ್ನಡ ಕಲಿಯುತ್ತಿದ್ದ ವಿದ್ಯಾರ್ಥಿಗಳು ಮಾತ್ರವಲ್ಲದೇ, ವಿಜ್ಞಾನ ವಿಷಯಗಳನ್ನು ಕಲಿಯುತ್ತಿದ್ದ ಕೆಲವು ವಿದ್ಯಾರ್ಥಿಗಳೂ ಸಹ ಮುಂದೆ ಬಂದು ಶಾಸ್ತ್ರಿಗಳೊಂದಿಗೆ ಸೇರಿ, 1918 ರಲ್ಲಿ ಕರ್ನಾಟಕ ಸಂಘಕ್ಕೆ ಜನ್ಮ ನೀಡಿದರು. ಇದಕ್ಕೆ ಶಾಸ್ತ್ರಿಗಳು ನೀಡಿದ ಸಲಹೆ, ಪ್ರೋತ್ಸಾಹ ಹೇಳಲಸಾಧ್ಯ.

ಶಾಸ್ತ್ರಿಗಳು ಎಂದೂ ತಾವು ಹಿಂದೆಯೇ ನಿಂತು ವಿದ್ಯಾರ್ಥಿಗಳಿಂದಲೇ ಕೆಲಸ ಮಾಡಿಸಿದರು. ಡಾ.ಬಿ.ಜಿ.ಎಲ್.ಸ್ವಾಮಿಯವರು ಅವರ 'ಪಂಚಕಲಶ ಗೋಪುರ' ಪುಸ್ತಕದಲ್ಲಿ ನವಿರಾದ ಹಾಸ್ಯದಿಂದ ಶಿಷ್ಯರು ಕೈಗೆತ್ತಿಕೊಳ್ಳುತ್ತಿದ್ದ ಕರ್ನಾಟಕ ಸಂಘದ ಚಟುವಟಿಕೆಗಳ ಬಗ್ಗೆ ಪ್ರಸ್ತಾಪಿಸುತ್ತಾ, ಹೇಗೆ ಶಾಸ್ತ್ರಿಗಳು ತಮ್ಮ ಕೆಲಸಗಳಿಗೆ, ಅಂದರೆ, ಕನ್ನಡದ ಅಭಿವೃದ್ಧಿಯ ಕೆಲಸಗಳಿಗೆ, ಶಿಷ್ಯರನ್ನು ಕರೆಸಿ ಕೆಲಸ ಮಾಡಲು ಆಜ್ಞಾಪಿಸುತ್ತಿದ್ದರು ಎಂದು ಬರೆದಿದ್ದಾರೆ. ಆ ಕಾಲದಲ್ಲಿ ಶಿಷ್ಯರಿಗೂ ಗುರುವಿನ ಮೇಲೆ ಭಯ, ಭಕ್ತಿ ಇತ್ತು. ಅವರು ಹೇಳಿದ, ಆಜ್ಞಾಪಿಸಿದ ಕಾರ್ಯಗಳನ್ನು ತಪ್ಪಿಲ್ಲದೇ ನಡೆಸಿಕೊಂಡು ಹೋಗುತ್ತಿದ್ದ ಕಾಲ. ಆಗ ಇದ್ದ ಕನ್ನಡ ಇಲಾಖೆಯ ಸ್ಥಳದ ಬಗ್ಗೆ ಡಾ.ಸ್ವಾಮಿಗಳು ಹೀಗೆ ಬರೆದಿದ್ದಾರೆ: "ಕಲ್ಲು ಕಾರ್ಖಾನೆಯಿಂದ ಚಿಮ್ಮುತ್ತಿದ್ದ ಪ್ರವಾಹ, ನಾರಾಯಣ ಎಂಬಾತನ ಹೋಟೆಲಿನ ಬಚ್ಚಲು ನೀರಿನ ಪ್ರವಾಹ ಮತ್ತು ಶೌಚ ಗೃಹದ ಹೊರ ಗುಂಡಿಯಿಂದ ಬರುತ್ತಿದ್ದ ಪ್ರವಾಹಗಳ ಸಂಗಮವಾಗುವ ಸ್ಥಳದ ಎದುರು ಕನ್ನಡ ಇಲಾಖೆ" ಅಂತ. ಈ ಒಂದು ಸ್ಥಳದ ಮಹಿಮೆಯೇ ಆಗ ಕನ್ನಡ ಭಾಷೆಗೆ ಇದ್ದ ಸ್ಥಾನಮಾನಗಳ ಅರಿವು ತಿಳಿಸುತ್ತದೆ. ಇಲ್ಲಿಯ ಒಂದು ಚಿಕ್ಕ ಕೊಠಡಿಯಲ್ಲಿ "ಕರ್ಣಾಟಕ ಸಂಘ"ವೂ ಕೂಡ ತನ್ನ ಕಾರ್ಯವನ್ನು ಆರಂಭಿಸಿತು. ಕೆಂಪುಬಣ್ಣದ ಮಂಗಳೂರು ಹೆಂಚಿನ ಕಟ್ಟಡವಾಗಿದ್ದು ಶ್ರೀ ಟಿ.ಎಸ್.ವೆಂಕಣ್ಣಯ್ಯನವರು ಕೈ ಎತ್ತಿದರೆ ಸೂರಿನ ಕೆಲವು ಭಾಗಗಳು ತಗಲುತ್ತಿದ್ದವಂತೆ. ಅಲ್ಲಿ ಮೂರು ರೂಮುಗಳು ಇದ್ದು ಅಧ್ಯಾಪಕರು ಒಂದು ಕೊಠಡಿಯಲ್ಲಿ ಕುಳಿತುಕೊಳ್ಳುತ್ತಿದ್ದರಂತೆ. ಇಲ್ಲೇ ಶಾಸ್ತ್ರಿಗಳು ಕುಳಿತುಕೊಳ್ಳುತ್ತಿದ್ದುದು. ರೂಮು ಆಸನಗಳು ಹೇಗಿದ್ದರೇನು? ಕನ್ನಡ ಸಂಘದ ಚಟುವಟಿಕೆಗಳೂ, ಪ್ರಬುದ್ಧ ಕರ್ಣಾಟಕ ಪತ್ರಿಕೆಯೂ ಇಲ್ಲೇ ಚರ್ಚೆಯಾಗಿ ರೂಪುಗೊಂಡವು. ಕಾಲೇಜು ನಡೆಯುವ ದಿನಗಳಲ್ಲೇ ಒಂದೊಂದು ದಿನ ಸಂಘದ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ವಿವಿಧ ಸಂಘಗಳ ಕಾರ್ಯದರ್ಶಿಗಳೂ ಮತ್ತು ಕಾಲೇಜಿನ ಪ್ರಿನ್ಸಿಪಾಲರೂ ಸೇರಿ ಯಾವ ಸಂಘದ ಸಭೆಗೆ ಯಾವತ್ತು ದಿನಗಳು ಎಂದು ಗೊತ್ತು ಮಾಡುತ್ತಿದ್ದರಂತೆ. ತಿಂಗಳಿಗೆ 1.ರೂ ಚಂದಾ ಹಣ ನೀಡಿ ಅನೇಕ ಸಾರ್ವಜನಿಕರೂ ಕೂಡ ಸಂಘದ ಸದಸ್ಯರಾದರು. ವಿದ್ಯಾರ್ಥಿಗಳೂ ಸಹ ಚಂದಾ ನೀಡಿ ಸಂಘದ ಸದಸ್ಯರಾದರಂತೆ. ಚಂದಾ

ಹಣಕ್ಕಾಗಿ ವಿದ್ಯಾರ್ಥಿ ಕಾರ್ಯದರ್ಶಿ ಅಲ್ಲದೆ ಸ್ವತಃ ಶಾಸ್ತ್ರಿಗಳು, ತಾವೇ ಸೈಕಲ್ ನಲ್ಲಿ ಸುತ್ತಿ ಚಂದಾ ಹಣ ವಸೂಲಿ ಮಾಡುತ್ತಿದ್ದರಂತೆ.

ಶಾಸ್ತ್ರಿಗಳು ಸೆಂಟ್ರಲ್ ಕಾಲೇಜಿನ ಭೌತಶಾಸ್ತ್ರ ಶಾಖೆಯ ಮುಖ್ಯಸ್ಥರಾದ ಪ್ರೊ|ಬೆಳ್ಳಾವೆ ವೆಂಕಟನಾರಾಣಪ್ಪನವರನ್ನು ಕನ್ನಡ ಸಂಘದ ಅಧ್ಯಕ್ಷರನ್ನಾಗಿ ನೇಮಿಸಿ, ತಾವು ಉಪಾಧ್ಯಕ್ಷರಾದರು. ಕಾರ್ಯದರ್ಶಿ ಸ್ಥಾನಕ್ಕೆ ಒಬ್ಬ ವಿದ್ಯಾರ್ಥಿಯನ್ನೇ ನೇಮಿಸುತ್ತಿದ್ದರು. ಆಗ ಕರ್ಣಾಟಕ ಸಂಘವು ವಿದ್ಯಾರ್ಥಿಗಳಿಂದಲೂ, ಬೇರೆ ವಿಷಯಗಳ ತಜ್ಞರಿಂದಲೂ ತಪ್ಪದೆ ಕನ್ನಡದಲ್ಲಿ ಉಪನ್ಯಾಸ ಕೊಡಲು ಅಹ್ವಾನಿಸಿ ಬೆಂಗಳೂರಿನ ಗಣಿತ ಶಾಸ್ತ್ರದ ಭವನದಲ್ಲಿ ಸಮಾರಂಭಗಳನ್ನು ಏರ್ಪಾಡು ಮಾಡುತ್ತಿತ್ತು. ಗಣ್ಯ ವ್ಯಕ್ತಿಗಳ ಪರಿಚಯ, ಅಭಿನಂದನೆ, ವಿದ್ವತ್ತು ಪೂರ್ಣವಾದ ಪ್ರಬಂಧಗಳ ಮಂಡನೆ, ಪುಸ್ತಕಗಳ ವಿಮರ್ಶೆ ಇತ್ಯಾದಿಗಳ ಬಗ್ಗೆ ಕೂಡ ಉಪನ್ಯಾಸಗಳು ಇರುತ್ತಿದ್ದವಂತೆ. ತಮ್ಮ ಶಿಷ್ಯರ ಮೇಲೆ ಶಾಸ್ತ್ರಿಗಳಿಗೆ ಅತ್ಯಂತ ಒಲವು. ಒಮ್ಮೆ ಅವರ ಶಿಷ್ಯಂದಿರಾದ ಶ್ರೀ ಕೆ.ವಿ. ಪುಟ್ಟಪ್ಪನವರನ್ನು ಕವಿ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಸಮ್ಮೇಳನವನ್ನು ಏರ್ಪಡಿಸಿದರಂತೆ. ಕನ್ನಡದಲ್ಲಿ ಕವಿತೆಗಳನ್ನು ಬರೆಯುತ್ತಿದ್ದ ತರುಣ ಕವಿಗಳು ಭಾಗವಹಿಸುತ್ತಿದ್ದರಂತೆ. ಜಾನಪದ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದ ಶ್ರೀ ಗೋರೂರು ರಾಮಸ್ವಾಮ್ಯೆಂಗಾರರೂ ಸಹ ಶ್ರೀ ಡಿ.ವಿ.ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದರಂತೆ. ಶಾಸ್ತ್ರಿಗಳ ನೆಚ್ಚಿನ ಶಿಷ್ಯರುಗಳು ತಪ್ಪದೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಚ್ಚುಕಟ್ಟಾಗಿ ಕೆಲಸಗಳನ್ನು ನೆರವೇರಿಸುತ್ತಿದ್ದರು.ಇದೇ ರೀತಿ ಸಣ್ಣ ಕತೆಗಳ ಬರಹಗಾರರಿಗೂ, ಅನೇಕ ವಾಗ್ಮಿಗಳಿಗೂ ಅವಕಾಶ ದೊರಕಿ, ಸಂಘವು ತಮ್ಮದು, ಇಲ್ಲಿ ತಮ್ಮ ಪ್ರತಿಭಾಶಕ್ತಿಯನ್ನು ಇತರರೊಂದಿಗೆ ಹಂಚಿಕೊಳ್ಳಬಹುದು ಎನ್ನುವ ವಿಶ್ವಾಸ ಅವರುಗಳಿಗೆ ಹುಟ್ಟಿತಂತೆ. ಇಂತಹ ಕಾರ್ಯಕ್ರಮಗಳಿಗೆ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳೂ, ಕನ್ನಡ ಅಭಿಮಾನಿಗಳೂ ಬಂದು ಆ ಸಭಾ ಭವನ ಪೂರ್ತಿಯಾಗಿ ತುಂಬಿ ಹೋಗುತ್ತಿತ್ತಂತೆ. ಒಮ್ಮೆ ಸಂಘದ ವಾರ್ಷಿಕೋತ್ಸವದಲ್ಲಿ (1923–29), ಕಳಾಸಿಪಾಳ್ಯದ ವರದಾಚಾರ್ಯರ ರತ್ನಾವಳೀ ಥಿಯೇಟರ್ ನಲ್ಲಿ ಗದಾಯುದ್ಧ ಮತ್ತು ಅಶ್ವತ್ಥಾಮನ್ ನಾಟಕಗಳನ್ನು ಸಂಘದ ವಿದ್ಯಾರ್ಥಿಗಳೇ ಆಡಿ ಜನರ ಮನ ಗೆದ್ದಿದ್ದರಂತೆ.

ಹೀಗೆ ಸುಪ್ತವಾಗಿದ್ದ ಕನ್ನಡ ಕವಿಗಳನ್ನೂ ಕನ್ನಡ ಜನತೆಯ ಶಕ್ತಿಯನ್ನೂ ಕೂಡಿಹಾಕಿಕೊಂಡು, ಜನಜಾಗೃತಿಯನ್ನು ಕೆಲವೇ ವರ್ಷಗಳಲ್ಲಿ ಶಾಸ್ತ್ರಿಗಳು ಮೂಡಿಸಿದರು. ಏನೂ ಹೆಚ್ಚು ವರಮಾನವಿಲ್ಲದಿದ್ದರೂ ಕೂಡಿಟ್ಟ ಚಂದಾ ಹಣದಿಂದ ಕರ್ನಾಟಕ ಸಂಘವು ಕನ್ನಡ ಪುಸ್ತಕಗಳನ್ನು ಪ್ರಕಟಿಸಲು ಪ್ರಾರಂಭಿಸಿತು. ಅಲ್ಲದೆ ಒಬ್ಬ ಬಡ ವಿದ್ಯಾರ್ಥಿಗೆ ಪ್ರತಿ ವರ್ಷವೂ ಸುಮಾರು 50 ರೂ.ಗಳನ್ನು ನೀಡುತ್ತಿತ್ತು. ಸಾರ್ವಜನಿಕರ ಬೆಂಬಲದಿಂದ, ಸಂಘದ ವಿದ್ಯಾರ್ಥಿಗಳ ಸಂತೋಷ ಮತ್ತು ಒಲವಿನಿಂದ, ತಿಳಿಯದ ಹಾಗೆ ಸಾಹಿತ್ಯ ಪುಷ್ಪಗಳು ಅರಳುತ್ತಿರುವುದಕ್ಕೆ ಶುರುವಾಯಿತು. ಅವರು ಹುಟ್ಟುಹಾಕಿದ ಕರ್ನಾಟಕ ಸಂಘದ ಆರಂಭ ಭಾಷಣವನ್ನು ಶ್ರೀ ರಾವ್ ಬಹದ್ದೂರು ರಾ.ನರಸಿಂಹಾಚಾರ್ಯರು ಎಂತಹ ಸುಮುಹೂರ್ತದಲ್ಲಿ ಮಾಡಿದರೋ ಏನೋ, ಈ ಸಂಘವು ಸದ್ದಿಲ್ಲದೇ ಒಂದು ಹೆಮ್ಮರವಾಗಿ ಬೆಳೆಯಿತು. 1968 ರಲ್ಲಿ ಸಂಘವು ತನ್ನ 50 ನೇ ವರ್ಷದ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು. ಇದೇ ನಾಂದಿಯಾಗಿ ಈಗ ಕನ್ನಡಿಗರು ಎಲ್ಲೆಲ್ಲೂ ಕನ್ನಡ ಸಂಘಗಳನ್ನುಕಟ್ಟಿದ್ದಾರೆ.

ಪ್ರಬುದ್ಧ ಕರ್ನಾಟಕ

ಹೀಗೆ ಶುರುವಾದ ಕನ್ನಡ ಸಂಘದ ಚಟುವಟಿಕೆಯ ಫಲವಾಗಿ ವಿದ್ಯಾರ್ಥಿಗಳು ಕನ್ನಡದಲ್ಲಿ ಬರೆದ ಅನೇಕ ಲೇಖನಗಳೂ, ಕಥೆ, ಕವನ ಮತ್ತು ಕಾದಂಬರಿಗಳು ಹೇರಳವಾಗಿ ಶೇಖರವಾದವು.

ಶಾಸ್ತ್ರಿಗಳ ಆಪ್ತ ಶಿಷ್ಯರಾಗಿದ್ದ ಶ್ರೀ ಸಿ.ಕೆ.ವೆಂಕಟರಾಮಯ್ಯನವರು, ಶ್ರೀ ಎಸ್. ವಿ.ರಂಗಣ್ಣನವರು ಮತ್ತು ಶ್ರೀ ಎನ್. ನೀಲಕಂಠಪ್ಪನವರಂತಹವರೂ ಅತ್ಯುತ್ತಮವಾದ ಪ್ರಬಂಧಗಳನ್ನು ಬರೆದು ತಂದು ಕೊಟ್ಟರು. ಅಲ್ಲದೆ ಹೊರಗಡೆಯಿಂದ ಬಂದ ಮೇಧಾವಿ ವಿದ್ವಾಂಸರುಗಳು ಕನ್ನಡ ಸಂಘದ ಕಾರ್ಯಕ್ರಮಗಳಲ್ಲಿ ಪ್ರಸ್ತುತ ಪಡಿಸಿದ ಭಾಷಣಗಳ ಪ್ರತಿಗಳೂ ದೊರಕಿದವು. ಅನ್ಯಾಯವಾಗಿ ಈ ಬರವಣಿಗೆಗಳು ಚದರಿಹೋಗಿ ವ್ಯರ್ಥವಾಗುವುದಲ್ಲಾ ಅಂತ ಶಾಸ್ತ್ರಿಗಳು ಯೋಚಿಸಿ, ಇದನ್ನೆಲ್ಲಾ ಪ್ರಕಟಿಸಿದರೆ ಕನ್ನಡ ಜನತೆಗೆ

ಕನ್ನಡದಲ್ಲಿ ಜ್ಞಾನ ಪ್ರಸಾರವಾಗುತ್ತದೆ ಎಂಬ ಚಿಂತನೆಗಿಳಿದರು. ಯಥಾಪ್ರಕಾರ ಹಣದ ಕೊರತೆ ಇರುತ್ತದೆ, ಆದರೂ ಈ ವಿಷಯಕ್ಕೆ ವಿದ್ಯಾರ್ಥಿಗಳ ಪ್ರತಿಕ್ರಿಯೆ ಏನು ನೋಡೋಣ ಅಂತ ಯೋಚಿಸಿದರು. ಪ್ರಕಟಿಸಬೇಕಾದರೆ ಇರುವ ಕುಂದು ಕೊರತೆಗಳನ್ನು ಅವರ ಮುಂದಿಟ್ಟು, ವಿದ್ಯಾರ್ಥಿಗಳು ವೆಚ್ಚ ವಹಿಸಿಕೊಂಡರೆ ಪತ್ರಿಕೆ ಹೊರಡಿಸಲು ಸಾಧ್ಯ ಅಂತ ಮನವರಿಕೆ ಮಾಡಿದರಂತೆ. ಆಗ ವಿದ್ಯಾರ್ಥಿಗಳಾಗಿದ್ದ ಸುಬ್ಬಾ ಜೋಯಿಸ್, ಎಲ್.ನಾರಾಯಣರಾವ್, ಸಿ.ಎನ್.ಶ್ರೀನಿವಾಸ ಅಯ್ಯಂಗಾರ್, ಬಿ.ಎಸ್.ಮಾಧವರಾವ್, ಪಿ.ಕೃಷ್ಣರಾವ್, ಎಂ.ಸಿದ್ದಲಿಂಗಯ್ಯ ಮುಂತಾದವರುಗಳು ಕೃಷ್ಣಶಾಸ್ತ್ರಿಗಳನ್ನು ಸುತ್ತಿಕೊಂಡು ಚಂದಾದಾರರಾಗಲು ಒಪ್ಪಿದರಂತೆ. ಅದರಂತೆ ವರ್ಷಕ್ಕೆ 3 ರೂ. ಕೊಡುವವರನ್ನು ಚಂದಾದಾರರಾಗಿ ಮಾಡಿ ಅದಕ್ಕಿಂತ ಹೆಚ್ಚು ಚಂದಾ ಕೊಡುವವರನ್ನು ಪೋಷಕರು ಎಂದು ಕರೆಯಲಾಯಿತಂತೆ. ಸೈಕಲ್ ಏರಿ ಶಾಸ್ತ್ರಿಗಳು ಚಂದಾದಾರರ ಮನೆಗಳಿಗೆ ಹೋಗಿ ಚಂದಾವನ್ನು ವಸೂಲಿ ಮಾಡುತ್ತಿದ್ದರಂತೆ. ಆಯಾ ಸಂಚಿಕೆಗಳಲ್ಲಿ ಕೃತಜ್ಞತೆಯಿಂದ ಚಂದಾದಾರರ ಹೆಸರುಗಳನ್ನು ಪ್ರಕಟಿಸುತ್ತಿದ್ದರಂತೆ. ಲೇಖನಗಳನ್ನು ಬರೆದವರಿಗೆ ಸಂಭಾವನೆ ನೀಡಲು ಸಾಧ್ಯವಿಲ್ಲವೆಂದು ತಿಳಿಯಪಡಿಸಿದರಂತೆ. ಪತ್ರಿಕೆಯು ಪ್ರಕಟವಾದಾಗ, ಮೊದಲ ಸಂಚಿಕೆಯಲ್ಲಿ ಶಾಸ್ತ್ರಿಗಳು ತಮ್ಮ ಮುನ್ನುಡಿಯಲ್ಲಿ ಹೀಗೆ ಬರೆದರು: " ಸಾಹಿತ್ಯವು ಜನರಿಗೆ ಬೇಕಿಲ್ಲವೆನ್ನುವುದು ನಿಜವಲ್ಲ..............ಉತ್ತಮ ಸಾಹಿತ್ಯ ಶಾಶ್ವತವಾಗಿ ನಿಲ್ಲಬಹುದು. ಕಾಲನು ಉತ್ತಮ ಸಾಹಿತ್ಯ ರತ್ನಗಳಿಗೆ ಮನಸೋತು ಅವುಗಳನ್ನು ಆರಿಸಿ, ಕಟ್ಟಿ, ಕಂಠದಲ್ಲಿ ಧರಿಸಿಕೊಂಡು ಹೋಗುವನು" ಅಂತ ಬರೆದಿದ್ದಾರೆ. ಮತ್ತೊಂದು ಕಡೆ ಅವರು ಬರೆದದ್ದು:" ನಮ್ಮಲ್ಲಿ ಬೆಳ್ಳಿಯಿಲ್ಲ, ಬಂಗಾರವಿಲ್ಲ; ಆದರೆ ಯಾವುದು ಇದೆಯೋ ಅದನ್ನು ನಿರ್ವಂಚನೆಯಿಂದ ಕೊಡುತ್ತೇವೆ. ನಾವು ಮಾಡತಕ್ಕ ಕೆಲಸವನ್ನು ದೃಢದಿಂದಲೂ, ನಿರ್ವಂಚನೆಯಿಂದಲೂ ಮಾಡಿದರೆ ಸರಸ್ವತಿಯೂ ಲಕ್ಷ್ಮಿಯೂ ತಾವಾಗಿಯೇ ಸಹಾಯಕ್ಕೆ ಬಂದು ನಿಲ್ಲುವರೆಂದು ನನಗೆ ಧೈರ್ಯವಿದೆ". ಎಂತಹ ಆಲೋಚನೆ, ದೃಢ ಸಂಕಲ್ಪ, ಒಳ್ಳೆಯ ಮನಸ್ಸು ಹಾಗೂ ದೂರ ದೃಷ್ಟಿ ಎ.ಆರ್.ಕೃ ಅವರದ್ದು! (ಈಗಲೂ ಪ್ರಬುದ್ಧ ಕರ್ಣಾಟಕ ಮಧ್ಯೆ ಮಧ್ಯೆ ನಿಂತರೂ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಲೇ ಇದೆ).

ಮುಂದಿನ ಕೆಲಸ ಪತ್ರಿಕೆಗೆ ನಾಮಕರಣ ಮಾಡಬೇಕಾಗಿ ಬಂತು. ಆಗ ಟಿ.ಎಸ್. ವೆಂಕಣ್ಣಯ್ಯನವರೂ, ಕೃಷ್ಣಶಾಸ್ತ್ರಿಗಳೂ ರಾಮಕೃಷ್ಣಾಶ್ರಮಕ್ಕೆ ಹೋಗುತ್ತಿದ್ದರು. ಹಾಗಾಗಿ ರಾಮಕೃಷ್ಣ ಆಶ್ರಮದ ಸ್ವಾಮಿ ನಿರ್ಮಲಾನಂದರವರ ಪರಿಚಯವಾಯಿತಂತೆ. ಅವರ ಕೋರಿಕೆಯಂತೆ ಈ ಯಮಳರು ಶ್ರೀ ರಾಮಕೃಷ್ಣ ಪರಮಹಂಸರ ಮೇಲೆ ಒಂದು ಕಿರಿಹೊತ್ತಿಗೆಯನ್ನು ಬರೆದುಕೊಟ್ಟರು. ಆ ಸಮಯದಲ್ಲಿ ಸಂಘದ ಪತ್ರಿಕೆ ಹೊರಡಿಸುವ ಮಾತು ಬಂದು, ಉತ್ತರ ಭಾರತದಲ್ಲಿ 'ಪ್ರಬುದ್ಧ ಭಾರತ' ಎನ್ನುವ ಧಾರ್ಮಿಕ ಪತ್ರಿಕೆ ಇದೆ, ನೀವು ಯಾಕೆ 'ಪ್ರಬುದ್ಧ ಕರ್ಣಾಟಕ' ಎಂಬ ಹೆಸರಿನಲ್ಲಿ ನಿಮ್ಮ ಪತ್ರಿಕೆಯನ್ನು ಹೊರಡಿಸಬಾರದು ಎಂದು ಸ್ವಾಮೀಜಿಯವರು ಸೂಚಿಸಿದರಂತೆ. ಇದಕ್ಕೆ ಮೊದಲು ಶಾಸ್ತ್ರಿಗಳು ಹೊಸದಾಗಿ ಹೊರಬರುವ ಈ ಪತ್ರಿಕೆಗೆ 'ವಿದ್ಯಾರ್ಥಿ' ಎಂಬ ಹೆಸರಿಡಬೇಕೆಂದು ಯೋಚಿಸಿದ್ದರಂತೆ. ಆದರೆ ಅದೇ ಹೆಸರಿನಲ್ಲಿ ಕೇರಳ ದಿಂದ ಒಂದು ಪತ್ರಿಕೆ ಬರುತ್ತಿದ್ದರಿಂದ ಅದು ಬೇಡವೆನಿಸಿತ್ತು. ಹಾಗಾಗಿ 'ಪ್ರಬುದ್ಧ ಕರ್ಣಾಟಕ' ಎಂಬ ಹೆಸರು ಎಲ್ಲರಿಗೂ ಒಪ್ಪಿಗೆಯಾಗಿ, ಸ್ವಾಮಿಜಿ ಅವರಿಂದ ಪ್ರೇರಿತವಾದ ಈ ಹೆಸರಿಂದಲೇ ಪತ್ರಿಕೆಗೆ ನಾಮಕರಣವಾಯಿತು. ಶಾಸ್ತ್ರಿಗಳು ತಾವೇ ಕೂತು ಮುಖ ಪುಟದ ವಿನ್ಯಾಸ ಮತ್ತು ಚಿತ್ರವನ್ನೂ ಬಿಡಿಸಿದರು. ಈ ಚಿತ್ರದಲ್ಲಿ ಕರ್ಣಾಟಕದ ಸೂರ್ಯದೇವನ ಸನ್ನಿಧಿಯಲ್ಲಿ ಆಗಲೇ ಅರಳಿರುವ ಮತ್ತು ಮೊಗ್ಗಾಗಿ ಮುಂದೆ ಅರಳ ಬೇಕಾಗಿರುವ ಹೃತ್ಕಮಲಗಳನ್ನುರೂಪಿಸಿ ಸಂಘದ ಅಧ್ಯಕ್ಷರಾಗಿದ್ದ ಶ್ರೀ ವೆಂಕಟನಾರಣಪ್ಪನವರ ಒಪ್ಪಿಗೆಯನ್ನೂ ಮೆಚ್ಚುಗೆಯನ್ನೂ ಪಡೆದರು. ಅದಲ್ಲದೆ ಪತ್ರಿಕೆಯಲ್ಲಿ ಶಾಸ್ತ್ರಿಗಳ ಮುನ್ನುಡಿಯೊಂದಿಗೆ, ಸಂಪಾದಕೀಯ ಲೇಖನಗಳೊಂದಿಗೆ, ಪತ್ರಿಕೆಯಲ್ಲಿನ ಲೇಖನಗಳ ಸೂಚಿ, ಕರ್ಣಾಟಕ ಸಂಘದಿಂದ ಮುದ್ರಿತವಾಗುತ್ತಿದ್ದುದರಿಂದ ಸಂಘದ ಹೆಸರು, ಇಸವಿ, ಸಂಪುಟ ಮತ್ತು ಸಂಚಿಕೆಯ ವಿವರ–ಇವೆಲ್ಲವೂ ಮುದ್ರಿತವಾದವು.

ಈ ಪತ್ರಿಕೆ ಶುರುವಾದಾಗ 100 ವಿದ್ಯಾರ್ಥಿಗಳಿಂದ ತಲಾ 1 ರೂ. ಚಂದಾ ವಸೂಲಿ ಮಾಡಿದ್ದರಂತೆ. ಪತ್ರಿಕೆಯನ್ನು ಎಷ್ಟು ಸುಂದರವಾಗಿ, ಒಳ್ಳೆಯ ಲೇಖನಗಳನ್ನೊಳಗೊಂಡು ಅಚ್ಚು ಮಾಡಿದರೂ ಚಂದಾದಾರರು ಬಹಳ ಕಡಿಮೆ

ಇದ್ದರು, ಅಲ್ಲದೆ ಚಂದಾದಾರರ ಮನೆಗಳಿಗೆ ಹೋಗಿ ಆಗ ಬಾ, ಈಗ ಬಾ ಅಂತ ಅನ್ನಿಸಿಕೊಳ್ಳಬೇಕಾಗಿ ಬಂತು ಅಂತ ತುಂಬಾ ವ್ಯಥೆಯಿಂದ ಶಾಸ್ತ್ರಿಗಳು ಬರೆದಿದ್ದಾರೆ. ಕೇವಲ ಒಂದು ತಿಂಗಳಿಗೆ 4 ರೂ. ಸಂಬಳದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಆಳಿನ ಹೊರತು, ಸಹಾಯಕ ಸಿಬ್ಬಂದಿಗಳಿಲ್ಲದೇ ಕೆಲಸ ಮಾಡಬೇಕಾಗಿ ಬಂತು ಎಂದು ಹೇಳಿದ್ದಾರೆ. ಅತ್ಯಂತ ದೇಹ ಶ್ರಮ ಮತ್ತು ಬುದ್ಧಿಶ್ರಮದಿಂದ ಅಹೋರಾತ್ರಿ ಶ್ರಮಿಸಿ ಪತ್ರಿಕೆಯನ್ನು ಬೆಳೆಸುವಾಗ ಶಾಸ್ತ್ರಿಗಳಿಗೆ ಕೆಲವೊಮ್ಮೆ ತುಂಬಾ ತೊಂದರೆ ಆಗಿ ಪತ್ರಿಕೆಯನ್ನು ನಿಲ್ಲಿಸಬಿಡಬೇಕೆಂಬ ಯೋಚನೆಯೂ ಬಂದಿತ್ತಂತೆ. ಆದರೆ ಪತ್ರಿಕೆಯ ಆಯಸ್ಸು ಇನ್ನೂ ಇತ್ತು ಎಂದು ಬರೆಯುತ್ತಾರೆ. ಒಮ್ಮೆ ಈ ತೊಂದರೆಗಳ ಬಗ್ಗೆ ಬಿ.ಎಂ.ಶ್ರೀ ಮತ್ತು ಟಿ.ಎಸ್.ವೆಂಕಣ್ಣಯ್ಯ ನವರೊಡನೆ ಪ್ರಸ್ತಾಪಿಸಿದರಂತೆ. ಪತ್ರಿಕೆಯನ್ನು ವಿಶ್ವವಿದ್ಯಾನಿಲಯವು ಸರ್ಕಾರದ ಪತ್ರಿಕೆಯಾಗಿ ನಡೆಸಲು ಸಾಧ್ಯವೇ ಎಂದು ಕೇಳಿದರಂತೆ. ಆಗ ಬಿ.ಎಂ.ಶ್ರೀ ಅವರು ವಿಶ್ವವಿದ್ಯಾನಿಲಯದ ಅಧಿಕಾರಿಗಳೊಡನೆ ಮಾತನಾಡಿ, ಎಷ್ಟೋ ಸಲ ಚರ್ಚೆ ಆದಮೇಲೆ, ಪ್ರಬುದ್ಧ ಕರ್ಣಾಟಕ 14 ನೇ ಸಂಪುಟದಿಂದ ವಿಶ್ವವಿದ್ಯಾನಿಲಯದ ಪೋಷಣೆಯಲ್ಲಿ ಪ್ರಕಟವಾಗಲು ಒಪ್ಪಿಗೆಯನ್ನು ದೊರಕಿಸಿಕೊಟ್ಟರು. ಈಗಲೂ ಪ್ರಬುದ್ಧ ಕರ್ಣಾಟಕ ವಿಶ್ವವಿದ್ಯಾನಿಲಯದ ಗ್ರಂಥ ಪ್ರಕಾಶನ ಸಮಿತಿಯ ಮೇಲ್ವಿಚಾರಣೆಯಲ್ಲಿ ಪ್ರಕಟವಾಗುತ್ತಿದೆ.

1932 ರಿಂದ ವಿಶ್ವವಿದ್ಯಾನಿಲಯದಿಂದ ಪತ್ರಿಕೆ ಪ್ರಕಟವಾಗುತ್ತಿದ್ದಾದರೂ, ಗ್ರಂಥ ಪ್ರಕಾಶನ ಮೇಲ್ವಿಚಾರಣೆಯ ಜೊತೆಗೆ ಬಿ. ಎಂ. .ಶ್ರೀ ಅವರು ಮುಖ್ಯ ಸಂಪಾದಕರಾಗಿದ್ದರು. ಟಿ ಎಸ್. ವೆಂಕಣ್ಣಯ್ಯನವರು ಮತ್ತು ಎ.ಆರ್.ಕೃ ಅವರುಗಳು ಸಂಪಾದಕರಾಗಿಯೂ ತೀ.ನಂ. ಶ್ರೀಕಂಠಯ್ಯ, ಡಾ.ಕೆ.ವಿ ಪುಟ್ಟಪ್ಪ ಮತ್ತು ವಿ. ಸೀತಾರಾಮಯ್ಯನವರುಗಳು ಸಮಿತಿಯ ಸದಸ್ಯರಾಗಿ ಕೆಲಸ ಮಾಡಲು ಶುರು ಮಾಡಿದರು. ಎಲ್ಲರೂ ಕನ್ನಡದ ಅಭಿಮಾನಿಗಳೇ!

ಆದರೆ ಟಿ ಎಸ್. ವೆಂಕಣ್ಣಯ್ಯನವರಿಗೆ ಆರೋಗ್ಯ ಅಷ್ಟು ಸರಿಯಿಲ್ಲದೆ ಈ ಕೆಲಸದಲ್ಲಿ ಕೆಲವು ಶಿಷ್ಯರು ಅವರಿಗೆ ನೆರವಾಗಿರುತ್ತಿದ್ದರು. ಶಾಸ್ತ್ರಿಗಳು ವೆಂಕಣ್ಣಯ್ಯನವರ ನಿಧನಾನಂತರ ಪ್ರೊಫೆಸರ್ ಆಗಿ ಬಡ್ತಿ ಹೊಂದಿ ಬೆಂಗಳೂರಿನಿಂದ ಮೈಸೂರಿಗೆ

ವರ್ಗವಾಗಿ ಬಂದರು. ಆಗ ಪತ್ರಿಕೆಯನ್ನು ನಡೆಸುವುದನ್ನು ಶಾಸ್ತ್ರಿಗಳು ಮತ್ತೆ ವಹಿಸಿಕೊಳ್ಳಬೇಕಾಗಿ ಬಂತು.

ಪ್ರೊಫೆಸರ್ ಆಗಿ ಕನ್ನಡ ಎಂ.ಎ ತರಗತಿಯನ್ನು ಶುರುಮಾಡಿದರು. ಆದರೆ ಕೆಲಸದ ಒತ್ತಡ ತುಂಬಾ ಹೆಚ್ಚಾಗಿ ಆಗ ಕುಲಪತಿಗಳಾಗಿದ್ದ ಎನ್.ಎಸ್ ಸುಬ್ಬರಾಯರನ್ನು ಭೇಟಿ ಮಾಡಿದರು. ಅವರು ಪತ್ರಿಕೆಯ ವಿಚಾರವಾಗಿ ಕೆಲವು ಸಲಹೆಗಳನ್ನು ಇತ್ತು, ಪತ್ರಿಕೆಗೆ ಬೇಕಾದ ಹಣವನ್ನು ವಿಶ್ವವಿದ್ಯಾನಿಲಯ ಬಿಡುಗಡೆ ಮಾಡುತ್ತೆ, ಪ್ರಬುದ್ಧ ಕರ್ಣಾಟಕ ಒಂದು ಉತ್ತಮ ಪತ್ರಿಕೆಯಾಗಿ ಹೊರಬರಲು ಶ್ರಮಿಸಿ ಎಂದು ಸೂಚಿಸಿದರು. ಆಗ ಶಾಸ್ತ್ರಿಗಳು ತಮ್ಮ ಸಂಪಾದಕೀಯ ಲೇಖನದಲ್ಲಿ "ವಿಶ್ವವಿದ್ಯಾನಿಲಯವು ಪತ್ರಿಕೆಯನ್ನು ಯಾವ ರೀತಿ ತಂದರೂ ನಾನು ಸುಮ್ಮನಿದ್ದೆ. ದ್ರವ್ಯ ಸಹಾಯ ಸಿಕ್ಕಿದ ಮೇಲೆ ಮತ್ತೆ ಆಸೆ ಚಿಗುರಿ ಈ ಆರುತ್ತಿರುವ ನಂದಾದೀಪಕ್ಕೆ ಎಣ್ಣೆ ಕೊಡುತ್ತಾರಂತೆ, ನೋಡೋಣ! ಬತ್ತಿ ಸರಿಮಾಡಿ ದೀಪ ದೊಡ್ಡದು ಮಾಡೋಣ! ಹೆಚ್ಚು ಬೆಳಕು ಬಂದರೆ ಬರಲಿ; ಮೈ ಮಸಿಯಾದರೂ, ಕೈ ಜಿಡ್ಡಾದರೂ ಚಿಂತೆಯಿಲ್ಲ ಎಂದುಕೊಂಡು ಮತ್ತೆ ದೀಪದ ಮುಂದೆ ಕುಳಿತೆ" ಎಂದು ಬರೆದಿದ್ದಾರೆ. ಮೈಸೂರಿನಲ್ಲಿ 17 ಸಂಚಿಕೆಗಳನ್ನು ವೆಸ್ಲಿ ಪ್ರೆಸ್ ನವರ ಸಹಕಾರದಿಂದ ಸಕಾಲಕ್ಕೆ ಮೈದುಂಬಿಸಿ ಪ್ರಕಟಿಸಿದರು. ಕಾಲಕ್ರಮೇಣ ಅವರಿಗೆ ಕೆಲಸ ತುಂಬಾ ಹೆಚ್ಚಾಗಿ, ತಮ್ಮನ್ನು ಪತ್ರಿಕೆಯ ಕೆಲಸದಿಂದ ಬಿಟ್ಟು ಕೊಡಬೇಕೆಂದು ವಿಶ್ವವಿದ್ಯಾನಿಲಯಕ್ಕೆ ವಿನಂತಿಸಿಕೊಂಡರು. ಆಗ ವಿಶ್ವವಿದ್ಯಾನಿಲಯದವರು ಇನ್ನು ಮುಂದೆ ಕನ್ನಡದ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವವರು ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿರಬೇಕೆಂದು ಸೂಚಿಸಿದರು. ಹಾಗಾಗಿ ಪ್ರೊ. ವಿ. ಸೀತಾರಾಮಯ್ಯನವರು ಪತ್ರಿಕೆಯ ಸಂಪಾದಕತ್ವವನ್ನು ವಹಿಸಿಕೊಂಡರು. ಸಂಪಾದಕರಾಗಿದ್ದಾಗ ಪತ್ರಿಕೆಗೆ 27 ವರ್ಷಗಳು ತುಂಬಿದಾಗ ಶಾಸ್ತ್ರಿಗಳು ಪ್ರಬುದ್ಧ ಕರ್ಣಾಟಕದ ಬೆಳ್ಳಿ ಹಬ್ಬವನ್ನು ಆಚರಿಸಿ ಸಂತೋಷಪಟ್ಟರು. ಆದರೆ ಅವರು ಪ್ರಬುದ್ಧ ಕರ್ಣಾಟಕದ ಚಿನ್ನದ ಹಬ್ಬವನ್ನು ನೋಡುವ ಭಾಗ್ಯ ಪಡೆದಿರಲಿಲ್ಲ. ಅವರ ಆಸೆಯಂತೆ ಕನ್ನಡ ಭಾಷೆ, ನಡೆ- ನುಡಿ ಬಗ್ಗೆ ಆದರವಿರುವವರು ಪತ್ರಿಕೆಯನ್ನು ನಡೆಸಿಕೊಂಡು ಬಂದರೆ ಅವರ ಆತ್ಮಕ್ಕೆ ಖಂಡಿತ ಶಾಂತಿ ಸಿಗುವುದು ಅನ್ನುವ ಮಾತು ಸುಳ್ಳಾಗುವುದಿಲ್ಲ.

ಅವರ ದೃಢ ನಿರ್ಧಾರ, ಪತ್ರಿಕೆಯ ಬಗ್ಗೆ ಇದ್ದ ಒಲವು ಮತ್ತು ಅವರ ಶಿಷ್ಯರ ಸಮೂಹದ ಮೇಲೆ ಇದ್ದ ವಾತ್ಸಲ್ಯ, ಮಮತೆ ಇಂದಿಗೂ ಪತ್ರಿಕೆಗೆ ಜೀವ ತುಂಬುತ್ತಿದೆ. ಹೀಗೆ ಅವರು ಕನ್ನಡಕ್ಕಾಗಿ ಕರ್ಣಾಟಕ ಸಂಘ ಕಟ್ಟಿ ಮತ್ತು ಪ್ರಬುದ್ಧ ಕರ್ಣಾಟಕದ ಶ್ರೇಯೋಭಿವೃದ್ಧಿಗೆ ನೀಡಿದ ದುಡಿಮೆಗೆ ಕನ್ನಡಿಗರು ಏನು ಕೊಟ್ಟರೂ ಕಡಿಮೆಯೇ. ಈಗಾಗಲೇ ರಸ್ತೆಗೊಂದು ಕನ್ನಡ ಸಂಘ, ನೂರಾರು ಕನ್ನಡ ವಾರ ಮಾಸ ಪತ್ರಿಕೆಗಳು ಬರುತ್ತಿವೆ. ಆದರೆ ಪ್ರಬುದ್ಧ ಕರ್ಣಾಟಕ ಪತ್ರಿಕೆ ಈಗಲೂ ಅದರ ಉದ್ದೇಶವನ್ನು ಚಾಚೂ ತಪ್ಪದೆ ವಿದ್ವಾಂಸರಿಂದ ಲೇಖನಗಳನ್ನು ಪ್ರಕಟಿಸಿ ತನ್ನತನವನ್ನು ಕಾಪಾಡಿಕೊಂಡು ಬಂದಿದೆ. ಶಾಸ್ತ್ರಿಗಳ ಕಾಲದಲ್ಲಿ ಸುಮಾರು ವಿದ್ಯಾರ್ಥಿಗಳು ಅವರ ಸುಳಿಯಲ್ಲಿ ಸಿಕ್ಕಿಬಿದ್ದು ಹೊರತಂದ ಸಣ್ಣಕತೆಗಳು, ವಿಜ್ಞಾನ ವಿಷಯಗಳು, ಸಂಶೋಧನಾತ್ಮಕ ಲೇಖನಗಳು ಮತ್ತು 400 ರಷ್ಟು ಗ್ರಂಥಗಳ ವಿಮರ್ಶೆಗಳು ಒಂದು ದೊಡ್ಡ ಪಟ್ಟಿಯೇ ಆಗುತ್ತದೆ! ಯಾವ ಧನದಾಸೆಯೂ, ಬಿರುದುಗಳಾಸೆಯೂ ಇಲ್ಲದೆ ಮಾಡಿದ ಈ ಎರಡು ಕೆಲಸಗಳೂ, ಶಾಸ್ತ್ರಿಗಳು ಅವರನ್ನು ಪೋಷಿಸಿದ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅತ್ಯಂತ ಮಹತ್ವದ ಕೊಡುಗೆ ಎನ್ನಬಹುದು. ಆಗ ಅವರು ಬರೆದ ಸಂಪಾದಕೀಯ ಲೇಖನಗಳನ್ನು ಓದಿದರೆ, ಕನ್ನಡದಲ್ಲಿ ಹೀಗೂ ಬರೆಯಬಹುದೇ ಅಂತ ಅನ್ನಿಸದೇ ಇರುವುದಿಲ್ಲ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ........

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಡಾ.ಎ.ಆರ್. ಕೃಷ್ಣಶಾಸ್ತ್ರಿಗಳ ಕೊಡುಗೆ

"ಸಿರಿಗನ್ನಡಂ ಗೆಲ್ಗೆ, ಕನ್ನಡ ತಾಯ್ ಬಾಳ್ಗೆ!"– ಇವು ರಾಜಸೇವಾಸಕ್ತ ಶ್ರೀಮಾನ್ ಬಿ.ಎಂ.ಶ್ರೀಕಂಠಯ್ಯನವರು ಕರ್ಣಾಟಕ ಸಂಘದ ಒಂದು ಮುಕ್ತಾಯ ಭಾಷಣದಲ್ಲಿ ಆಡಿದ ಅಣಿ ಮುತ್ತುಗಳು. ಈ ನುಡಿ ನೂರಾರು ರೀತಿಯಲ್ಲಿ ಕನ್ನಡ ಜನತೆಯ ಮನದಲ್ಲಿಯೂ ಹೃದಯಾಳದಲ್ಲಿಯೂ ಅಂಕುರವಾಗಿ, ನವೋದಯ ವಿದ್ವಾಂಸರುಗಳು ಕನ್ನಡ ಅಭಿವೃದ್ಧಿಗೆ ಕಂಕಣ ತೊಟ್ಟು ಕೆಲಸ ಮಾಡಲು ಶುರುಮಾಡಿದರು. ಬಿ.ಎಂ.ಶ್ರೀ ಅವರ ಸಹವಾಸದಲ್ಲಿದ್ದ

ಎ.ಆರ್.ಕೃ ಅವರೂ ಸಹ ಅವರಿಂದ ಬಹುಬೇಗ ಪ್ರಭಾವಿತರಾದರು. ಶಾಸ್ತ್ರಿಗಳು ಬಿ.ಎಂ.ಶ್ರೀ ಅವರ ಇಂಗ್ಲಿಷ್ ಪಾಂಡಿತ್ಯದಿಂದ ಇಂಗ್ಲಿಷ್ ಭಾಷೆಯನ್ನು, ಇಂಗ್ಲಿಷ್ ಸಾಹಿತ್ಯ ಶಬ್ದ ಭಂಡಾರವನ್ನು ಅರ್ಥೈಸಿಕೊಳ್ಳುವಿಕೆ, ಸಾಹಿತ್ಯ ವಿಮರ್ಶೆಯ ಸ್ವರೂಪ ಮತ್ತು ಬರವಣಿಗೆಯ ಸ್ವರೂಪ-ಇವೆಲ್ಲವನ್ನೂ ಕಲಿತರು. ನಿರ್ಜೀವ ಭಾಷೆಯೆಂದೇ ಕರೆಯಲ್ಪಡುತ್ತಿದ್ದ ಸಂಸ್ಕೃತ ಭಾಷೆಯನ್ನು ತಂದೆಯಿಂದ ಅಧ್ಯಯನ ಮಾಡಿದ್ದ ಶಾಸ್ತ್ರಿಗಳು ಪ್ರೊ. ಹಿರಿಯಣ್ಣನವರ ಸಹವಾಸದಿಂದ ಮತ್ತಷ್ಟು ಭಾಷೆಯ ಮೇಲೆ ಹಿಡಿತ ಸಾಧಿಸಿದರು. ಹಾಗೆಯೇ ಬಿ.ಎಂ.ಶ್ರೀ ಮತ್ತು ಶ್ರೀ ವರದಾಚಾರ್ಯರ ಪ್ರಭಾವವು ಶಾಸ್ತ್ರಿಗಳಿಗೆ ಕನ್ನಡ ಸಾಹಿತ್ಯದ ಇತಿಮಿತಿಯನ್ನು ತಿಳಿಯಲು ಅನುಕೂಲವಾಯಿತು. ಹೀಗೆ ಪ್ರಭಾವಿತರಾಗಿದ್ದ ಶಾಸ್ತ್ರಿಗಳು ವಿಶ್ವವಿದ್ಯಾನಿಲಯದಲ್ಲಿ ಟ್ಯೂಟರ್ ಆಗಿ ಸೇರಿದ ಮೇಲೆ ಕನ್ನಡ ಕೆಲಸವನ್ನು ಕೈಗೆತ್ತಿಕೊಳ್ಳಲು ಸಜ್ಜಾದರು. ಜೊತೆಗೆ ಅವರ ಆತ್ಮೀಯ ಶಿಷ್ಯವೃಂದದಲ್ಲಿದ್ದ ಸಿ.ಕೆ. ವೆಂಕಟರಾಮಯ್ಯ, ಎಸ್.ವಿ.ರಂಗಣ್ಣ ಮತ್ತು ಡಾ.ಕೆ.ವಿ. ಪುಟ್ಟಪ್ಪ –ಇಂತಹವರ ಸಹಾಯ ಹಾಗೂ ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸ್ನೇಹ ಮತ್ತು ಆತ್ಮೀಯತೆ, ಯಾವಾಗಲೂ ಏನೊಂದು ಕೆಲಸ ಮಾಡಲು ಅವರ ಆತ್ಮೀಯ ಗೆಳೆಯ ಟಿ.ಎಸ್.ವೆಂಕಣ್ಣಯ್ಯ-ಇವರ ಸಹಾಯ, ಸಲಹೆ ಇವೆಲ್ಲವೂ ಶಾಸ್ತ್ರಿಗಳಿಗೆ ದೊರಕಿತು.

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಅಭಿಮಾನಿಗಳು ಕನ್ನಡ ಭಾಷೆ ನಡೆನುಡಿಗಳನ್ನು ಅಭಿವೃದ್ಧಿ ಪಡಿಸಲು ಒಂದು ಸಂಸ್ಥೆಯ ಅವಶ್ಯಕತೆ ಇದೆ ಎಂದು ಬಹು ಬೇಗ ಕಂಡುಕೊಂಡರು. ಇದರ ಫಲವೇ 1915 ನೇ ಇಸವಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಒಂದು ಗರಡಿಯೇ ಆಗಿತ್ತು; ಒಂದು ತತ್ವಕ್ಕಾಗಿ, ಒಂದು ನಿಷ್ಠೆಗಾಗಿ, ನೇರವಾದ ಗುರಿ ಇಟ್ಟುಕೊಂಡು ಕನ್ನಡ ಶ್ರೇಯೋಭಿವೃದ್ಧಿಗೆ ಕೆಲಸ ಮಾಡಲು ಒಂದು ಕೇಂದ್ರವಾಗಿ ರೂಪುಗೊಂಡಿತು. ಬಿ.ಎಂ.ಶ್ರೀ ಅವರು ಪರಿಷತ್ತಿನ ಉಪಾಧ್ಯಕ್ಷರಾಗಿ ಟೊಂಕ ಕಟ್ಟಿ ಕನ್ನಡದ ಕೆಲಸಕ್ಕೆ ನಿಂತರು. ಜೊತೆಗೆ ಡಿ.ವಿ.ಗುಂಡಪ್ಪನವರು ಪರಿಷತ್ತನ್ನು ಬಲಪಡಿಸಲು ಶ್ರಮಿಸಿದರು. ಇವರುಗಳು

ಪರಿಷತ್ತಿನ ಹೆಸರನ್ನೂ, ಆ ಸಂಸ್ಥೆಯ ಉದ್ದೇಶವನ್ನೂ ನಾಡಿನ ಮೂಲೆ ಮೂಲೆಗೂ ಹರಡುವ ಯೋಜನೆಗಳನ್ನು ಹಾಕಿಕೊಂಡಿದ್ದರು. ಇಂತಹ ಕೆಲಸಗಳ ಬಗ್ಗೆ ಪ್ರಚಾರ ಮಾಡಲು ಆಗ ಇದ್ದ ಏಕೈಕ ಸಾಧನೆ: 'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ'. ಅದನ್ನು ಶೀಘ್ರದಲ್ಲಿಯೇ ಪರಿಷತ್ತು ಮುದ್ರಣ ಮಾಡಿತು. ಸ್ವಲ್ಪ ತಿಂಗಳುಗಳ ಕಾಲ ಡಿ.ವಿ.ಜಿ ಅವರು ಈ ಪತ್ರಿಕೆಯನ್ನು ನಡೆಸಿದರು. ಇತರ ಕಾರ್ಯಭಾರದಿಂದ ಅವರಿಗೆ ಈ ಕೆಲಸ ಮುಂದುವರಿಸಲು ಆಗಲಿಲ್ಲ. ಆಗ ಈ ಪತ್ರಿಕೆಯ ಸಂಪಾದಕೀಯ ವಿಭಾಗ, ವಿಮರ್ಶೆ ವಿಭಾಗ, ವ್ಯಾಕರಣ ದೋಷಗಳನ್ನು ಸರಿಪಡಿಸಬೇಕಿತ್ತು. ಡಿ.ವಿ.ಜಿ ಮತ್ತು ಬೆಳ್ಳಾವೆ ವೆಂಕಟನಾರಾಯಣಪ್ಪನವರು ಈ ಪತ್ರಿಕೆಯನ್ನು ಉತ್ತಮ ಸ್ಥಿತಿಗೆ ತರಲು ವಿದ್ವಾಂಸರ ಅಗತ್ಯವಿದೆ ಎಂದು ಯೋಚಿಸಿ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಶಾಸ್ತ್ರಿಗಳಿಗೆ ಪತ್ರಿಕೆಯನ್ನು ನಡೆಸುವ ಕಾರ್ಯ ವಹಿಸಿದರು. ಹೀಗೆ ಕೃಷ್ಣಶಾಸ್ತ್ರಿಗಳಿಗೆ ಪತ್ರಿಕೆ ನಡೆಸುವ ಜವಾಬ್ದಾರಿ ಅಂಟುಕೊಂಡಿತು. ಎಂ.ವಿ.ಸೀತಾರಾಮಯ್ಯನವರು ಕೃಷ್ಣಶಾಸ್ತ್ರಿಗಳಿಗೆ ಸಹಾಯಕ ಕಾರ್ಯದರ್ಶಿಯಾಗಿ ನೇಮಕವಾದರು.

ಸುಮಾರು 6–7 ವರ್ಷಗಳ ಕಾಲ ಶಾಸ್ತ್ರಿಗಳು ಪತ್ರಿಕೆಯನ್ನು ನಡೆಸಿದರು. ಎ.ಆರ್.ಕೃ ಅವರ ಘನವಾದ ಸಂಪಾದಕಿಯ ಲೇಖನಗಳನ್ನು ಒಳಗೊಂಡ ಈ ಪತ್ರಿಕೆ ಹೆಚ್ಚು ಹೆಚ್ಚು ವಿತರಣೆ ಆಗಿ ಒಂದು ಸ್ವರೂಪವನ್ನು ಪಡೆಯಿತು. ಆಧುನಿಕ ಸಂಶೋಧನಾತ್ಮಕ ಲೇಖನಗಳನ್ನು ಬರೆಸಿ ಪ್ರಾಚ್ಯ ಲೇಖನ ಮಾಲೆ ಎಂಬ ಉಪಯುಕ್ತ ವಿಭಾಗವನ್ನು ಪ್ರಾರಂಭಿಸಿದರು. ಪತ್ರಿಕೆಯಲ್ಲಿ ಪ್ರಕಟವಾದ ಗಮನಾರ್ಹ ಲೇಖನಗಳ ಸೂಚಿಯನ್ನು ಕೊಟ್ಟು ಕೆಲವೊಮ್ಮೆ ಆ ಲೇಖನಗಳ ಸಾರಾಂಶವನ್ನೂ ಸಹ ಕೊಡುತ್ತಿದ್ದರು. ಅನೇಕ ವಿದ್ವಾಂಸರುಗಳಿಂದ ಪುಸ್ತಕಗಳ ಬಗ್ಗೆ ವಿಮರ್ಶೆಯನ್ನು ಬರೆಸಿ ಅವನ್ನೂ ಸಹ ಪ್ರಕಟನೆ ಮಾಡುತ್ತಿದ್ದರು. ಅಲ್ಲದೆ ಕನ್ನಡೇತರರಿಗೆ ಲೇಖನಗಳ ಸಾರ ತಿಳಿಯಲೆಂದು ಇಂಗ್ಲಿಷ್ ನಲ್ಲಿಯೂ ಸಾರಾಂಶವನ್ನು ಕೊಡುತ್ತಿದ್ದರು. ಹೊರದೇಶಗಳಲ್ಲಿ ಪ್ರಕಟವಾಗುತ್ತಿದ್ದ ಕೆಲವು ಉತ್ತಮ ಸಾಹಿತ್ಯ ಪತ್ರಿಕೆಗಳನ್ನು ಪಡೆಯಲು, ಈ ಪರಿಷತ್ ಪತ್ರಿಕೆಯನ್ನು ಆ ಪ್ರಕಾಶಕರಿಗೆ ಕಳುಹಿಸುವ ಏರ್ಪಾಡನ್ನೂ ಶಾಸ್ತ್ರಿಗಳು ಮಾಡಿದರು.

ಕನ್ನಡ- ಕನ್ನಡ ನಿಘಂಟು: ಕನ್ನಡನಾಡಿನ ಪ್ರಮುಖ ವಿದ್ವಾಂಸರುಗಳು ಸಭೆ ಸೇರಿ 1915, ಮೇ 3ನೇ ತಾರೀಖು, ಪರಿಷತ್ತಿನ ಉದ್ದೇಶಗಳನ್ನು ವಿವರಿಸುವಾಗ ಕನ್ನಡ-ಕನ್ನಡ ನಿಘಂಟಿನ ರಚನೆಯೂ ಪರಿಷತ್ತಿನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿರಬೇಕೆಂದು ತೀರ್ಮಾನಿಸಿದರು. ಮೊದಲು ಕನ್ನಡ ಶಟ್ಪದಿ ಕಾವ್ಯಗಳನ್ನು ಕೂಲಂಕಶವಾಗಿ ಪರಿಶೀಲಿಸಿ ದೊರೆಯುವ ದೇಶ್ಯಶಬ್ದಗಳ ನಿಘಂಟುವಿನ ರಚನೆಯನ್ನು ಕೈಗೊಳ್ಳಲಾಯಿತು. ಈಗಲೂ ಪರಿಷತ್ತಿನಲ್ಲಿ ಹಸ್ತಪ್ರತಿಯ ರೂಪದಲ್ಲಿರುವ ಶಟ್ಪದಿ ಕಾವ್ಯಗಳ ಕನ್ನಡ-ಕನ್ನಡ ನಿಘಂಟು ಇದೆ. ಅನಂತರ ಪ್ರಾಚೀನ ನಿಘಂಟುಗಳಾದ 'ಕವಿ ಕಂಠಹಾರ' 'ಚತುರಾಸ್ಯ ನಿಘಂಟು' ಮತ್ತು 'ಮಂಗರಾಜ ನಿಘಂಟು' ಇವೇ ಮೊದಲಾದ ನಿಘಂಟುಗಳಿಂದ ಕೂಡಿದ ನಿಘಂಟುಗಳ-ನಿಘಂಟನ್ನು ಪರಿಷತ್ತು ಸಿದ್ಧಪಡಿಸಿತು. ಈ ಎಲ್ಲಾ ನಿಘಂಟುಗಳನ್ನು ಹೊರತರುವುದರಲ್ಲಿ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಪಾತ್ರ ಹಿರಿದಾಗಿತ್ತು. 1919 ರಿಂದ 1930 ರ ವರೆಗೆ ಪರಿಷತ್ತು ಈ ನಿಘಂಟು ಕಾರ್ಯದಲ್ಲಿ ತೊಡಗಿತ್ತು.

ಈ ಮಧ್ಯೆ ಕನ್ನಡ ವಿದ್ವಾಂಸರಿಗೆಲ್ಲಾ ಕನ್ನಡ ಪದಗಳಿಗೆ ಸರಳವಾಗಿ ಕನ್ನಡದ ಪದಗಳ ಮೂಲಕವೇ ಅರ್ಥವನ್ನು ಹೇಳುವ, ಆಧಾರಭೂತವಾಗಿರುವ, ಸಪ್ರಮಾಣದ ಉತ್ತಮ ನಿಘಂಟು ಇಲ್ಲದಿರುವ ಕೊರತೆ ಕಾಣುತ್ತಿತ್ತು. ಈ ಕೊರತೆ 1941 ರಲ್ಲಿ ಹೈದರಾಬಾದಿನಲ್ಲಿ ಸೇರಿದ್ದ ಪರಿಷತ್ತಿನ ಸಕಲ ಸದಸ್ಯರ ಗಮನ ಸೆಳೆಯಿತು. ಶ್ರೀ ರಂ. ಶ್ರೀ ಮುಗಳಿಯವರು ಈ ಸಭೆಯಲ್ಲಿ ಕನ್ನಡ ಕೋಶ ರಚನೆಯ ಅಗತ್ಯವನ್ನು ವಿವರಿಸಿ, ಕನ್ನಡ ಸಾಹಿತ್ಯ ಪರಿಷತ್ತು ಇಂತಹ ನಿಘಂಟುವಿನ ಕಾರ್ಯವನ್ನು ಕೈಗೊಳ್ಳಬೇಕೆಂಬ ನಿರ್ಣಯವನ್ನು ಮಂಡಿಸಿದರು. ರಂ.ಶ್ರೀ. ಮುಗಳಿಯವರು ಸಂಚಾಲಕರಾಗಿದ್ದ ಈ ಸಮಿತಿಯಲ್ಲಿ ಒಂದು ಉಪಸಮಿತಿ ರಚನೆಯಾಯಿತು. ಈ ಸಮಿತಿಯ ಸಲಹೆ-ತೀರ್ಮಾನಗಳನ್ನುಪರಿಷತ್ತಿನ ಕಾರ್ಯ ಸಮಿತಿಯು ಅಂಗೀಕರಿಸಿ, ಪರಿಷತ್ತು ಒಂದು ಸಂಪಾದಕ ಸಮಿತಿಯನ್ನುನೇಮಿಸಿತು. ಅದು ಹೀಗೆ ಇತ್ತು:

1. ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳು-ಅಧ್ಯಕ್ಷರು
2. ಶ್ರೀ ಡಿ.ಎ..ನರಸಿಂಹಾಚಾರ್ಯ-ಸದಸ್ಯರು

3. ಶ್ರೀ ಕ.ವೆಂ.ರಾಘವಾಚಾರ್ಯ -ಸದಸ್ಯರು

4. ಶ್ರೀ ತೀ.ನಂ.ಶ್ರೀಕಂಠಯ್ಯ- ಕಾರ್ಯದರ್ಶಿಗಳು

18ನೇ ಡಿಸೆಂಬರ್ 1943 ರಲ್ಲಿ ಈ ಸಮಿತಿಯು ಮೊದಲನೆಯ ಸಲ ಸಭೆ ಸೇರಿ ಒಂದು ಯೋಜನೆಯನ್ನು ಸಿದ್ಧಪಡಿಸಿತು. 2ನೇ ಜನವರಿ 1944ರಲ್ಲಿ ನಿಘಂಟುವಿನ ಕಛೇರಿಯು ಅಸ್ತಿತ್ವಕ್ಕೆ ಬಂತು. ಅನೇಕ ವಿದ್ವಾಂಸರುಗಳಿಂದ ಕೂಡಿದ್ದ ಒಂದು ಸಹಾಯಕ ಸಮಿತಿಯನ್ನೂ ರಚಿಸಲಾಯಿತು. ಈ ಸಹಾಯಕ ಸಮಿತಿಯ ಕಾರ್ಯ: ಸಮಿತಿಗೆ ಒದಗಬಹುದಾದ ಸಂದೇಹಗಳನ್ನು ಪರ್ಯಾಲೋಚಿಸಿ ಸಹಾಯ ಮಾಡುವುದು. ಹಾಗೂ ತೆಲುಗು, ಮಲಯಾಳ, ತುಳು, ಪ್ರಾಕೃತ, ಮರಾಠಿ ಭಾಷೆಗಳಿಗೆ ಸಂಬಂಧ ಪಟ್ಟ ಭಾಷೆಯ ವಿಶೇಷಾಂಶಗಳನ್ನು ತಿಳಿಸುವುದು ಅಂತ ನಿರ್ಣಯವಾಯಿತು. ವಿದ್ವಾಂಸರು ಅತ್ಯಂತ ಅಭಿಮಾನದಿಂದ ಕೆಲಸವನ್ನು ಪ್ರಾರಂಭಿಸಿದರು. ಕೃಷ್ಣಶಾಸ್ತ್ರಿಗಳು ಮಾದರಿ ಪುಟಗಳಲ್ಲಿ ಬಂದ ಎಲ್ಲಾ ಅಕ್ಷರಗಳನ್ನೂ, ವಿಮರ್ಶೆಗಳನ್ನೂ ಗಮನಿಸಿ ಅಕಾರಾದಿ ಕ್ರಮದಲ್ಲಿ ಮೊದಲನೆಯ ಎಂಟು ಪುಟಗಳನ್ನು ಸಿದ್ಧ ಮಾಡಿ -ಈ ಕರಡು ಪ್ರತಿಯನ್ನು- ಸಮಿತಿಯ ಮುಂದೆ ಇಟ್ಟರು. ಇದನ್ನು ಈಗಲೂ ಪರಿಷತ್ತಿನಲ್ಲಿ ಕಾಣಬಹುದು ಎಂದು ತಿಳಿಯಿತು. ಅಲ್ಲದೆ ನಿಘಂಟುವಿನ ಸ್ವರೂಪವನ್ನು ಬಹು ಮಟ್ಟಿಗೆ ನಿರ್ಧಾರ ಮಾಡಿ ವಿದ್ವಜ್ಜನರಿಂದ ಬರಬಹುದಾದ ಸೂಚನೆ, ಅಭಿಪ್ರಾಯ, ಸಲಹೆಗಳನ್ನು ಗಮನಿಸಬೇಕಾದ್ದು ಅವಶ್ಯಕ ಎಂದು ಸೂಚಿಸಿದರು. ಕರಡು ಪ್ರತಿಯನ್ನು ಸಿದ್ಧಪಡಿಸಲು ಶಾಸ್ತ್ರಿಗಳು ಪಟ್ಟ ಶ್ರಮ ಎಷ್ಟೆಂದು ಹೇಳತೀರದು; ಅವರು ಹಲವಾರು ನಿಘಂಟುಗಳ ಗ್ರಂಥಗಳ ಮಧ್ಯೆ ಮುಳುಗಿಹೋಗಿದ್ದರು. ಯಾವ ಒಂದು ಶಬ್ದ ಚರ್ಚೆಗೆ ಬಂದರೂ ಸದಸ್ಯರ ಅಭಿಪ್ರಾಯಗಳನ್ನು ಕೇಳಿಕೊಂಡು ಕಡೆಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಶಾಸ್ತ್ರಿಗಳು ಸೂಚಿಸಿಬಿಡುತ್ತಿದ್ದರಂತೆ. ಶಾಸ್ತ್ರಿಗಳ ಜೊತೆ ಕೆಲಸ ಮಾಡುತ್ತಿದ್ದವರು ಒಮ್ಮೆ ಎರಡು ಪದಗಳ ಬಗ್ಗೆ -ಅಂದರೆ 'ಅತ್ತಿಗೆ' ಮತ್ತು'ಆಯಕ' ದ ಬಗ್ಗೆ- ಎಷ್ಟು ಚರ್ಚೆ ಆಯಿತು ಎಂದು ತಿಳಿಸಿದ್ದಾರೆ. ನಂತರ ನಿಘಂಟುವಿನ ಕಾರ್ಯಕ್ಕೆ ಶಾಸ್ತ್ರಿಗಳು ಪ್ರೊ. ಜಿ. ವೆಂಕಟಸುಬ್ಬಯ್ಯ ನವರನ್ನು ತಂದು ನಿಲ್ಲಿಸಿದರು. ಪ್ರೊ.ಜಿ.ವಿ

ಅವರ ಅಧ್ಯಕ್ಷತೆಯಲ್ಲಿ ಮುಂದೆ ಅನೇಕ ವಿದ್ವಾಂಸರುಗಳು ಶಾಸ್ತ್ರಿಗಳು ಹಾಕಿದ ಅಡಿಪಾಯದ ಹಿನ್ನೆಲೆಯಲ್ಲಿ ಅದ್ಭುತ ಕೆಲಸ ಮಾಡಿದರು. ಬಹು ಕಷ್ಟಕರವಾದ ಈ ಯೋಜನೆಯನ್ನು ಸುಗಮವಾಗಿ ನಿರೂಪಿಸಿದ ಪ್ರೊ.ಜಿ.ವಿ ಅವರು ಈ ಕಾರ್ಯದಲ್ಲಿ ಕೃಷ್ಣಶಾಸ್ತ್ರಿಗಳು ನೀಡಿದ ಮಾರ್ಗದರ್ಶನವನ್ನು ಇಂದಿಗೂ ನೆನೆಯುತ್ತಾರೆ.

ಶಾಸ್ತ್ರಿಗಳು ಮೈಸೂರಿನಲ್ಲಿ ಪ್ರಕಟವಾಗುತ್ತಿದ್ದ ಇಂಗ್ಲೀಷ್ –ಕನ್ನಡ ನಿಘಂಟುವಿನ ಸಲಹಾಮಂಡಲಿಯ ಸದಸ್ಯರಾಗಿಯೂ ಸಹ ಕೆಲಸ ಮಾಡುತ್ತಿದ್ದರು. ಆಗ ಅವರು ಮೈಸೂರಿನಲ್ಲಿ ಕನ್ನಡ ಪ್ರೊಫೆಸರ್ ಆಗಿದ್ದರೂ, ಪರಿಷತ್ತಿನ ಪ್ರತಿಯೊಂದು ಮೀಟಿಂಗಿಗೂ ಬೆಂಗಳೂರಿಗೆ ತಪ್ಪಿಸಿಕೊಳ್ಳದೆ ಬರುತ್ತಿದ್ದರು. ಹೀಗೆ ಬಂದಾಗ ಬೆಂಗಳೂರಿನಲ್ಲಿದ್ದ ದೊಡ್ಡ ಮಗಳ ಮನೆಯಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಬಂದಾಗಲೆಲ್ಲಾ ಮಗಳಿಗೂ ಮೊಮ್ಮಕ್ಕಳಿಗೂ ಇಷ್ಟವಾದ ಮದ್ದೂರು ವಡೆ, ಚನ್ನಪಟ್ಟಣದ ಬೆಲ್ಲದ ಕೊಬ್ಬರಿ ಮಿಠಾಯಿಯನ್ನು ತಪ್ಪದೇ ತರುತ್ತಿದ್ದರು. ಹೀಗೆ ಅವರು ಕಷ್ಟಪಟ್ಟು ಎಷ್ಟೇ ದೇಹಾಯಾಸವಾದರೂ ಲೆಕ್ಕಿಸದೆ ತಾವು ಕೈ ಗೊಂಡ ಕಾರ್ಯವನ್ನು ನಡೆಸಿಕೊಂಡು ಬಂದರು. ಮುಂದೆ ನಿಘಂಟುವಿನ ಸಂಪಾದಕ ಮಂಡಲಿ ಬದಲಾಗಿ, ಶಾಸ್ತ್ರಿಗಳು 16–01–1958ರಂದು ನಿಘಂಟುವಿನ ಕೆಲಸದಿಂದ ದೂರವಾದರು. ಹೀಗೆ ಪ್ರಾರಂಭಿಸಿದ ಮಹಾಕಾರ್ಯವನ್ನು ಕೊನೆಮುಟ್ಟಿಸುವವರೆಗೆ ನಮ್ಮವರೇ ಆದ ನಾಡೋಜ ಪ್ರೊ. ಜಿ.ವೆಂಕಟಸುಬ್ಬಯ್ಯ ನವರು ದುಡಿದರೆಂಬುದು ನಮಗೆ ಹೆಮ್ಮೆಯ ವಿಚಾರ.

ಸಾಹಿತ್ಯ ಸಮ್ಮೇಳನ: ಪರಿಷತ್ತು ಅನೇಕ ಬಗೆಯ ಕನ್ನಡ ಕಲಾಪಗಳನ್ನು ಕೈಗೆತ್ತಿಕೊಂಡಾಗ, ಕನ್ನಡದ ಅಭಿವೃದ್ಧಿಗೆ ನೂರಾರು ವಿದ್ವಾಂಸರು ತಮ್ಮ ತನು ಮನವನ್ನೆಲ್ಲ ಅರ್ಪಿಸಿದರು ಎಂದು ಹೇಳಬಹುದು. ಪರಿಷತ್ತಿನ ಮೊದಲನೆಯ ಸಾಹಿತ್ಯ ಸಮ್ಮೇಳನ ದಿವಾನ್ ರಾಜಮಂತ್ರ ಪ್ರವೀಣ ಎಚ್.ವಿ.ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಈಗ ಚಾಮರಾಜ ಪೇಟೆಯಲ್ಲಿರುವ ಕೋಟೆ ಹೈಸ್ಕೂಲಿನಲ್ಲಿ ಶುರುವಾಯಿತು. ಅಂದು ಸೇರಿದ್ದ ಸಭೆಯಲ್ಲಿ ಕರ್ನಾಟಕದ ಎಲ್ಲಾ

ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಬಂದಿದ್ದು ಒಬ್ಬರಿಗೊಬ್ಬರಿಗೆ ಪರಿಚಯವಾಗಿ ಸಮಾರಂಭವೂ ಅದ್ದೂರಿಯಾಗಿ ನಡೆಯಿತಂತೆ. ಪರಿಷತ್ತಿನ ಮುಖ್ಯ ಸ್ಥಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಯಣಪ್ಪನವರು ಎಲ್ಲರಿಗೂ ಪರಿಚಯವಾದರು. ಶ್ರೀಯುತರು ಪರಿಷತ್ತಿನ ಏಳಿಗೆಗೆ ಬಹಳವಾಗಿಯೇ ಶ್ರಮಿಸಿದ್ದರು. ಆಗಲೇ ಅವರು ಬೆಂಗಳೂರಿನಲ್ಲಿ ಆನೇಕ ಸಾಹಿತ್ಯ ಸಮ್ಮೇಳನಗಳನ್ನೂ ಸಾಹಿತ್ಯೋತ್ಸವಗಳನ್ನೂ ನಡೆಸಲು ಉತ್ತೇಜನ ನೀಡುತ್ತಿದ್ದರು. ಅವರ ಕಾರ್ಯದಕ್ಷತೆ ಮತ್ತು ಉತ್ಸಾಹದ ಫಲದಿಂದಲೇ ಈಗ ಎಲ್ಲರೂ ಕಾಣುತ್ತಿರುವ ಪರಿಷತ್ ಮಂದಿರದ ಕಟ್ಟಡಕ್ಕೆ ಜಾಗ ದೊರೆಕಿದ್ದು. ಈ ಜಾಗದಲ್ಲಿ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವಂತೂ ಅತ್ಯಂತ ಸಂಭ್ರಮದಿಂದ ನಡೆದು ಅಂದು ಬಂದವರೆಲ್ಲಾ ಕೊಬ್ಬರಿ ಸಕ್ಕರೆ ತಿಂದು ಸಂತೋಷಪಟ್ಟರಂತೆ. ಶಾಸ್ತ್ರಿಗಳು ಈ ಸಮಾರಂಭವನ್ನು ವರ್ಣಿಸಿ ಹೀಗೆ ಬರೆಯುತ್ತಾರೆ: "ಶಂಕರಪುರದ ಒಂದು ಅಭುಕ್ತ ಮೂಲೆಯಲ್ಲಿ ಬಡ ಮುತ್ತೈದೆಯಂತೆ ಇದ್ದ ಪರಿಷತ್ತಿನ ಕಾರ್ಯಾಲಯ ಈಗ ಹಾರ್ಡಿಂಗ್ ರಸ್ತೆಗೆ-ರಾಜ ಬೀದಿಗೆ ಬಂದಿತು”. ಹೀಗೆ ಸಂಸ್ಥೆಗೆ ಹೊಸ ತೇಜಸ್ಸು ಮೂಡಿತು. ಆಗ ಉಪಾಧ್ಯಕ್ಷರಾಗಿದ್ದ ಡಿ.ವಿ.ಜಿ ಅವರು ಮಿಕ್ಕೆಲ್ಲ ಕೆಲಸಗಳನ್ನು ಬಿಟ್ಟು, ಅಹೋರಾತ್ರಿ ದುಡಿದು, ತಮ್ಮ ಅಧಿಕಾರಾವಧಿಯಲ್ಲಿ ಪ್ರತಿವರ್ಷವೂ ಬೆಂಗಳೂರಿನಲ್ಲಿ ವಿಶೇಷ ಕನ್ನಡ ಸಾಹಿತ್ಯೋತ್ಸವವನ್ನು ಏರ್ಪಡಿಸುತ್ತಿದ್ದರು. ಅಂತೆಯೇ ಗಮಕ, ಕಲಾವ್ಯಾಸಂಗ ತರಗತಿಗಳನ್ನು ಜಾರಿಗೆ ತಂದರು. ಮುಂದೆ ಇಂತಹ ಸಾಹಿತ್ಯ ಉತ್ಸವಗಳನ್ನು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲೂ ನಡೆಸುವುದೆಂದು ತೀರ್ಮಾನ ತೆಗೆದುಕೊಂಡರು. ಇದರಿಂದ ಕನ್ನಡ, ಸಂಸ್ಕೃತಿ, ಕಲೆಯ ಬಗ್ಗೆ ಹೊರ ಪ್ರಾಂತ್ಯದಲ್ಲಿರುವ ಜನರಿಗೆ ಹೆಚ್ಚಿನ ಅರಿವುಂಟಾಗುವುದೆಂದು ಮನಗಂಡರು. ಮೊದಲನೆಯ ಸಮ್ಮೇಳನದ ಅಧ್ಯಕ್ಷರಾಗಿದ್ದ ರಾಜಸೇವಾಸಕ್ತ ಹೆಚ್.ವಿ.ನಂಜುಂಡಯ್ಯನವರು 1915 ಮತ್ತು 1916 ರಲ್ಲಿ ಬೆಂಗಳೂರಿನಲ್ಲೂ 1917 ರಲ್ಲಿ ಮೈಸೂರಿನಲ್ಲೂ ಸಮ್ಮೇಳನದ ಅಧ್ಯಕ್ಷರಾಗಿ ಗೌರವಿಸಲ್ಪಟ್ಟರು. ಮುಂದೆ ಸಾಹಿತ್ಯದ ಏಳಿಗೆಗೆ ದುಡಿದಿದ್ದ ಅನೇಕ ಮಹನೀಯರುಗಳು ಸಮ್ಮೇಳನಾಧ್ಯಕ್ಷರಾಗಿ ಅಲಂಕರಿಸಿ ಕನ್ನಡ ಭಾಷಾ

ಸಾಹಿತ್ಯಕ್ಕೆ ಅಮೋಘ ಕಾಣಿಕೆಯನ್ನು ಇತ್ತರು. ಸಮ್ಮೇಳನವು ಮೂರು ದಿನಗಳ ಕಾಲ ನಡೆಯುತ್ತಿತ್ತು.


ಕೃಷ್ಣಶಾಸ್ತ್ರಿಗಳನ್ನು 1941 ರಲ್ಲಿ ಹೈದರಾಬಾದ್ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಲು ಪರಿಷತ್ತು ಆಹ್ವಾನಿಸಿತು. ಮುಂಚೆ ಒಂದು ಸಲ ಅವರಿಗೆ ಆಹ್ವಾನವಿತ್ತಾಗ ಆ ಭಾರ ಗೌರವ ಹೊರಲು ಆಗುವುದಿಲ್ಲವೆಂದು ನಿರಾಕರಿಸಿದ್ದರು. 1941 ರಲ್ಲಿ ಆಹ್ವಾನಿಸಿದಾಗ ತಮ್ಮ ಶಿಷ್ಯರಾದ ಸಿ.ಕೆ.ವೆಂಕಟರಾಮಯ್ಯನವರಿಗೆ "..............ಹಿಂದೆ ನಾನು ನಿರಾಕರಿಸಿದ್ದನ್ನು ನಿರ್ಲಕ್ಷಿಸಿ ಮತ್ತೊಮ್ಮೆ ನನ್ನನ್ನು ಆಹ್ವಾನಿಸಿದ್ದೀರಿ. ನನ್ನ ವಿದ್ಯಾಮಾತೆಯಾದ ಮಹಾರಾಜ ಕಾಲೇಜಿಗೂ, ಪ್ರಾಣದಾತೆಯಾದ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಈ ಮೂಲಕ ಆದರ ಗೌರವಗಳನ್ನು ತೋರಿಸಲಿಷ್ಟಪಟ್ಟರೆ ನಾನೇಕೆ ಅಡ್ಡ ಬರಲಿ?" ಅಂತ ಬರೆದು ಸಮ್ಮೇಳನಾಧ್ಯಕ್ಷರಾಗಲು ಒಪ್ಪಿಕೊಂಡರು. ತುಂಬಾ ಸಂತೋಷದಿಂದ ತಮ್ಮ ಸಂಸಾರದೊಂದಿಗೆ ಹೈದರಾಬಾದ್‌ಗೆ ಹೋಗಿ ಮೂರು ದಿನಗಳ ಕಾಲ ಸಮ್ಮೇಳನವನ್ನು ನಡೆಸಿಕೊಟ್ಟರು.

ಆಗ ಹೈದರಾಬಾದ್ ನಿಜ಼ಾಮರ ಆಡಳಿತದಲ್ಲಿತ್ತು. " ...ಆದರೂ ನಿಜ಼ಾಮರು ತಮ್ಮಸಂಸ್ಥಾನದಲ್ಲಿ ಹಿಂದೂಗಳೂ ಮುಸ್ಲಿಮರೂ ಸಮಭಾಗಿಗಳು. ಶಾಂತಿ, ಸಮಾಧಾನ ನೆಲೆಸಲು ಇಬ್ಬರೂ ಒಟ್ಟಿಗೆ ಕಾರ್ಯ ನಡೆಸಬೇಕೆಂದು ಅರಿತವರು. ಹೀಗಾಗಿ ಇಲ್ಲಿ ಹಿಂದೆ ಎರಡು ಸಮ್ಮೇಳನಗಳು ನಡೆದಿದ್ದರೂ ಈಗಲೂ ಮತ್ತೊಮ್ಮೆ ಅವಕಾಶ ನೀಡಿದ್ದಾರೆ" ಎಂದು ಹೇಳಿ ತಮ್ಮ ಭಾಷಣವನ್ನು ಶುರು ಮಾಡಿದರು.


ಪರಿಷತ್ತಿನ ಉದ್ದೇಶ ತಾಯಿ ನುಡಿಗೆ ಒಂದು ಸ್ಥಾನ ದೊರೆಕಿಸಿಕೊಡುವುದು ಎಂದು ಶಾಸ್ತ್ರಿಗಳು ಹೇಳುತ್ತಾ ಭಾಷೆಯ ಮೇಲೆ ತಾಯಿನಾಡಿನವರು ಅಭಿಮಾನ ಹೆಚ್ಚಿಸಿಕೊಳ್ಳಲಿ ಎನ್ನುವ ಧ್ಯೇಯವೂ ಆಗಿತ್ತು ಎಂದು ವಿವರಿಸಿದರು. "ಹಾಗೆಂದು ಇತರ ಭಾಷೆಗಳಾದ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಡೆಗಣಿಸುವಂತಿಲ್ಲ. ನಮ್ಮಲ್ಲಿ ನವ ಚೈತನ್ಯ ಉಂಟು ಮಾಡುವ ಭಾಷೆಗಳು ಯಾವುದಾದರೇನು? ಇಂಗ್ಲಿಷ್ ಭಾಷೆಯಿಂದ ಪಾಶ್ಚಾತ್ಯ ಸಾಹಿತ್ಯವನ್ನು

ಓದಬಹುದು. ವ್ಯವಹರಿಸಬಹುದು. ಆ ಭಾಷೆಯಿಂದ ರಚಿತವಾಗಿರುವ ಉತ್ತಮ ಸಾಹಿತ್ಯ ಕೃತಿಗಳನ್ನು ತರ್ಜುಮೆ ಮಾಡಿ ಕನ್ನಡಕ್ಕೂ ಆ ಕೃತಿಗಳನ್ನು ಪರಿಚಯ ಮಾಡಿಕೊಡಬಹುದು. ತರ್ಜುಮೆ ಕಾರ್ಯ ಹೆಚ್ಚಾಗಿ ಬೇರೆ ಬೇರೆ ಭಾಷೆಗಳಲ್ಲಿ ಇರುವ ಉತ್ತಮ ಸಾಹಿತ್ಯ ಕೃತಿಗಳು ಬೆಳಕಿಗೆ ಬರಲು ಸಹಾಯಕವಾಗುತ್ತದೆ....ಆದರೂ ನಿಮ್ಮ ನಿಲವು ಮೊದಲು ಕನ್ನಡವಾದ ನಿಮ್ಮ ಮಾತೃ ಭಾಷೆಗೆ ಹೆಚ್ಚಾಗಿರಬೇಕು..ಒಗ್ಗಟ್ಟಾಗಿ ಕೆಲಸ ಮಾಡಿ.... ಇರುವುದನ್ನು ಕಳೆದುಕೊಳ್ಳಬೇಡಿ...ವಿವೇಕದಿಂದ ನಡೆಯಿರಿ, ನಿಮ್ಮ ದಾರಿಸುಗುಮವಾಗುವುದು" ಎಂದು ಹಿತ ನುಡಿಗಳನ್ನು ನುಡಿದರು. ಅವರ ಭಾಷಣದಲ್ಲಿ ಹೊರಬಂದ ಕೆಲವು ಅನಿಸಿಕೆಗಳು ಮತ್ತು ಸಲಹೆಗಳು ಹೀಗಿದ್ದವು: ಶಿಕ್ಷಣ ಕ್ಷೇತ್ರದಲ್ಲೂ ಇಂಗ್ಲಿಷ್ ಭಾಷಾ ಸಾಹಿತ್ಯಕ್ಕೆ ನೀಡುವ ಸ್ಥಾನ ಕನ್ನಡಕ್ಕೂ ನೀಡಬೇಕು; ವಿಜ್ಞಾನ ಶಾಸ್ತ್ರಗಳಿಗೆ ದೊರಕುವ ಪ್ರೋತ್ಸಾಹ ಕನ್ನಡಕ್ಕೂ ಬಂದರೆ ಎಷ್ಟು ಚೆನ್ನ; ಕನ್ನಡ ಸಾಹಿತ್ಯ, ನಾಡು, ನುಡಿ ಇವುಗಳೆಲ್ಲದರ ಮೇಲೆ ಚರಿತ್ರಾತ್ಮಕವಾದ, ವಿಮರ್ಶೆಯನ್ನು ಒಳಗೊಂಡ ವ್ಯಾಸಂಗ ನಡೆಯಬೇಕು.

ಆಗಿನ ಕಾಲದಲ್ಲಿ ಕನ್ನಡ ಭಾಷೆಯಲ್ಲಿ ಬಿತ್ತರಿಸುವ ರೇಡಿಯೋ ಇರಲಿಲ್ಲ. ಮೈಸೂರಿನಲ್ಲಿ ಮಾತ್ರ ಒಂದು ಪುಟ್ಟ ಆಕಾಶವಾಣಿ ಸಂಸ್ಥೆಯನ್ನು ಹುಟ್ಟುಹಾಕಿ ನಡೆಸುತ್ತಿದ್ದರು. ಬಹಳ ವರ್ಷಗಳ ನಂತರ ಬೆಂಗಳೂರಿಗೆ ಅದನ್ನು ಸರ್ಕಾರ ವರ್ಗಾಯಿಸಿಕೊಂಡು ಮೇಲ್ವಿಚಾರಣೆ ವಹಿಸಿಕೊಂಡಿತು. ಆಕಾಶವಾಣಿಯಲ್ಲೂ ಸಂಗೀತಗಾರರಿಗೂ ಅಲ್ಪ ಸ್ವಲ್ಪ ಸಂಭಾವನೆ ದೊರಕುತ್ತಿದ್ದು, ಉಪನ್ಯಾಸ ಕೊಡುತ್ತಿದ್ದ ಕನ್ನಡ ಸಾಹಿತಿಗಳಿಗೆ ಏನೂ ಸಂಭಾವನೆ ನೀಡುತ್ತಿರಲಿಲ್ಲವಂತೆ. ಇದನ್ನು ಶಾಸ್ತ್ರಿಗಳು ಬಹಳ ನೋವಿನಿಂದ ಹೇಳಿದರು. ಒಮ್ಮೆ ಮೈಸೂರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಅತಿಥಿಗಳ ಕೋರಿಕೆಯಂತೆ ಗಾನ ವಿಶಾರದ ಬಿ.ಕೃಷ್ಣಪ್ಪನವರು ಕನ್ನಡದ ಕೀರ್ತನೆಗಳನ್ನೇ ಹಾಡಿದರಂತೆ. ಆದರೂ ಈಗಲೂ ಕನ್ನಡ ದಾಸರ ಪದಗಳನ್ನು ಕಡೆಯಲ್ಲೇ ಹಾಡುವುದನ್ನು ಗಮನಿಸಬಹುದು. ಅದರಲ್ಲೂ ಹೊರಗಡೆಯಿಂದ ಬಂದ ಸಂಗೀತ ಹೇಳುವವರು ಶಾಸ್ತ್ರಕ್ಕೆ ಒಂದು ಕನ್ನಡ ಹಾಡು ಹಾಡುವುದುಂಟು. ಅಂತೆಯೇ ಒಳ್ಳೆಯ ಕನ್ನಡ ಚಿತ್ರಗಳು ಹೊರಬರಬೇಕೆಂದರು. ಒಳ್ಳೆಯ ಚಿತ್ರಗಳು ಬಂದಿವೆ ಅಂತಲೂ ಶ್ಲಾಘಿಸಿದರು.



ಎರಡನೆ ಮುದ್ರಣಕ್ಕೆ ಶಾಸ್ತ್ರಿಗಳು
ತಿದ್ದಿ ಸಿದ್ಧಗೊಳಿಸಿದ
'ವಚನ ಭಾರತ'ದ ಒಂದು ಪುಟ



ಶಾಸ್ತ್ರಿಗಳು ಕಲಾತ್ಮಕವಾಗಿ ಸಿದ್ಧಗೊಳಿಸಿದ
ಒಂದು ಅರ್ಪಣೆಯ ಪುಟ



ವಿಹಾರಿಗಳಾಗಿ ಶಾಸ್ತ್ರಿಗಳು

ಕನ್ನಡ ಪುಸ್ತಕಗಳನ್ನು ಮತ್ತು ಕನ್ನಡ ಪತ್ರಿಕೆಗಳನ್ನು ಕೊಳ್ಳುವವರು ಕಮ್ಮಿ. ಜನ ಸಾಮಾನ್ಯರಿಗೆ ಉಪಯೋಗವಾಗುವಂತಹ ಸರಳ, ಸುಂದರ ಪುಸ್ತಕಗಳೂ, ಒಳ್ಳೆಯ ಪತ್ರಿಕೆಗಳೂ ಬಂದರೆ ಓದಲು ಜನ ಮುಂದಾಗುತ್ತಾರೆ ಅಂತ ಅಭಿಪ್ರಾಯಪಟ್ಟರು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆಯಲ್ಲಿ ಪುಸ್ತಕಗಳ ವಿಮರ್ಶೆ ಮತ್ತು ಸಂಶೋಧನೆಗಳನ್ನು ನಡೆಸಲಿದೆ. ಅದ್ದರಿಂದ ಆದಷ್ಟು ಜನ ಪರಿಷತ್ತಿಗೆ ಸದಸ್ಯರಾಗಿ ಅದರ ಕೆಲಸ ಕಾರ್ಯಗಳಿಗೆ ಬೆಂಬಲ ಕೊಡಿ ಅಂತ ಪ್ರಾರ್ಥಿಸಿದರು. ಮಹಿಳೆಯರಿಗೂ ಮನೆಯಲ್ಲಿ ಕನ್ನಡದಲ್ಲೇ ಮಾತಾಡಿ; ಸಂಸಾರದಲ್ಲಿ ಕನ್ನಡವನ್ನು ಕಾಪಾಡಿಕೊಂಡು ಬನ್ನಿ; ಕನ್ನಡದಲ್ಲಿ ಬಂದಿರುವ ಪುಸ್ತಕಗಳನ್ನು ಓದಿ; ಮಕ್ಕಳಿಗೂ ಓದಲು ಪ್ರೋತ್ಸಾಹಿಸಿ; ಕನ್ನಡವನ್ನು ಬೆಳೆಸಿ ಅನ್ನುವ ಕಿವಿಮಾತನ್ನು ಹೇಳಿದರು.

ಕೃಷ್ಣಶಾಸ್ತ್ರಿಗಳ ಕೃತಿಗಳು

ಎ.ಆರ್.ಕೃಷ್ಣಶಾಸ್ತ್ರಿಗಳು ಬರೆದಿರುವುದು ಸ್ವಲ್ಪವೇ ಆಗಿದ್ದರೂ ಎಲ್ಲವೂ ಉತ್ಕೃಷ್ಟ ಗ್ರಂಥಗಳು. ಅವರ ಸಾಹಿತ್ಯ ಪ್ರಕಟನೆಗಳು ಈ ರೀತಿ ಇವೆ:

ಭಾಸಕವಿ

ಸಂಸ್ಕೃತ ನಾಟಕ

ಶ್ರೀಪತಿಯ ಕಥೆಗಳು

ಸರ್ವಜ್ಞ ಕವಿ

ವಚನ ಭಾರತ

ಕಥಾಮೃತ

ಗದಾಯುದ್ಧ ನಾಟಕ ಮತ್ತು ಅದರ ನಾಯಕ

ನಿರ್ಮಲಭಾರತೀ ಅಥವಾ ಮಕ್ಕಳ ಮಹಾಭಾರತ

ಬಂಕಿಮ ಚಂದ್ರ

ಭಾಷಣಗಳು ಮತ್ತು ಲೇಖನಗಳು

ಭಾಷಾಂತರಗಳು:

ಸ್ವಾಮಿ ಶಿಷ್ಯ ಸಂವಾದ (ಶರಚ್ಚಂದ್ರ ಚಕ್ರವರ್ತಿ)

ನಾಗಮಹಾಶಯ (ಶರಚ್ಚಂದ್ರ ಚಕ್ರವರ್ತಿ)

ನಿಬಂಧಮಾಲ-2 (ರವೀಂದ್ರನಾಥ ಠಾಕೂರ್)

ಸಂಪಾದಿತ ಗ್ರಂಥಗಳು:

ಕವಿ ಜಿಹ್ವಾ ಬಂಧನಂ (ಈಶ್ವರ ಕವಿ)

ಟಿ.ಎಸ್.ವೆಂಕಣ್ಣಯ್ಯನವರೊಡನೆ ಸಿದ್ಧ ಪಡಿಸಿದ ಗ್ರಂಥಗಳು:

ಶ್ರೀ ರಾಮಕೃಷ್ಣಪರಮಹಂಸರ ಚರಿತ್ರೆ

ಹರಿಶ್ಚಂದ್ರ ಕಾವ್ಯ ಸಂಗ್ರಹ

ಕೃಷ್ಣಶಾಸ್ತ್ರಿಗಳ ಸಾಹಿತ್ಯ ಸೃಷ್ಟಿ, ಗದ್ಯ ಶೈಲಿ ಎಲ್ಲವೂ ಅಸದೃಶ್ಯವಾದವುಗಳು. ಸರಳ ಭಾಷೆ, ನೇರವಾದ ಬರವಣಿಗೆ, ಖಚಿತವಾದ ಅಭಿಪ್ರಾಯಗಳು, ನಿರೂಪಣಾ ಕೌಶಲ್ಯ, ಇವೆಲ್ಲವೂ ಇವರಿಗೆ ಕನ್ನಡ ನಾಡಿನ ಬಗ್ಗೆ ಮತ್ತು ಕನ್ನಡ ಭಾಷೆಯ ಬಗ್ಗೆ ಇದ್ದ ಕಳಕಳಿ ಹಾಗೂ ಪ್ರೇಮವನ್ನು ತೋರಿಸುತ್ತವೆ. ಸಂಸ್ಕೃತ ಸಾಹಿತ್ಯದ ಸರ್ವ ಗುಣಗಳನ್ನೂ ಕನ್ನಡಕ್ಕೆ ಒದಗಿಸಿದ್ದಾರೆ. ಹೀಗೆ ಸಂಸ್ಕೃತ ಭಾಷೆಯ ಸಾರವನ್ನೆಲ್ಲಾ ಕನ್ನಡ ಭಾಷಾ ಸಂಪತ್ತಿಗೆ ಸೇರ್ಪಡೆಯಾಗಿದೆಯೆಂದರೆ ಉತ್ಪ್ರೇಕ್ಷೆಯಾಗಲಾರದು. 'ಭಾಸ ಕವಿ' ಎಂಬ ಗ್ರಂಥ ಆ ಸಂಸ್ಕೃತ ನಾಟಕಕಾರನ ಕೃತಿಗಳ ಬಗ್ಗೆ ಕನ್ನಡಕ್ಕೆ ಬಂದಿರುವ ಒಂದು ಕೊಡುಗೆ. 'ಸಂಸ್ಕೃತ ನಾಟಕ' ದಲ್ಲಿ ಯಾವ ವಿಮರ್ಶೆಯನ್ನು ಓದಿದರೂ ಅದು ರತ್ನ ಕಾಂತಿಯಿಂದ ಕೂಡಿದೆಯೆಂದು ಅರಿವಾಗುತ್ತದೆ. 'ಶ್ರೀಪತಿಯ ಕಥೆಗಳು' ಅಕಾಲ ಮೃತ್ಯುವಿಗೆ ತುತ್ತಾದ ಅವರ ಮಗಳು ಕಮಲುವಿನ ನೆನಪಿಗೆ ಅಶ್ರು ತರ್ಪಣೆ; ಬಾಳ ಪಥದಲ್ಲಿ ಮನುಷ್ಯ ಏನೇನು ಕಷ್ಟ ಪಡುತ್ತಾನೆ; ಇದೆಲ್ಲಾ ಏತಕ್ಕಾಗಿ ಎಂದು ಯಾರಿಗೂ ಇನ್ನೂ ಅರ್ಥವಾಗದ ವಿಷಯ; ಆದರೆ ಮನಸ್ಸನ್ನು ವೈರಾಗ್ಯದತ್ತ ಹೋಗಗೊಟ್ಟು ನಿರ್ಮೋಹ ಭಾವವನ್ನು ಬೆಳೆಸಿಕೊಂಡರೆ ಜೀವನದಲ್ಲಿ ಸ್ವಲ್ಪ ಮಟ್ಟಿಗೆ ಶಾಂತಿ ಸಿಗಬಹುದು- ಇಂಥ ತೊಳಲಾಟದ ಕೊನೆಯಲ್ಲಿ ಮೂಡಿಬಂದ ಕೃತಿಯೇ- "ಶ್ರೀಪತಿಯ ಕಥೆಗಳು".

ಸರ್ವಜ್ಞನ ಹೆಸರಿನಲ್ಲಿ ಸಾವಿರಾರು ವಚನಗಳಿವೆ. ಸರ್ವಜ್ಞನನ್ನು ದೇವಾಂಶ ಸಂಭೂತನೆಂದು ಭಾವಿಸುತ್ತಾರೆ. ಸರ್ವಜ್ಞನೆಂದರೆ ಎಲ್ಲವೂ ತಿಳಿದವನು. ಜನತೆಯ ಕವಿ ಈ ಸರ್ವಜ್ಞ, ಸರ್ವಜ್ಞನ ವಚನಗಳಿಂದ ನೂರಕ್ಕೂ ಹೆಚ್ಚು ವಚನಗಳನ್ನು ಆರಿಸಿ, ಒಂದು ಪುಟ್ಟ ಪುಸ್ತಕದಲ್ಲಿ . ಪಾಠಕರಿಗಾಗಿ, ದೀರ್ಘವಾಗಿ ವಿಮರ್ಶಿಸಿ ಶಾಸ್ತ್ರಿಗಳು ಹೊರತಂದ ಪುಸ್ತಕ: ಸರ್ವಜ್ಞ ಕವಿ. 'ವಚನ ಭಾರತ' ಅವರ ಮೇರು ಕೃತಿ. ಅತ್ಯಂತ ಜನಾದರಣೀಯವಾಗಿದೆ. ಈ ಕೃತಿಗೆ ಅವರು ಬರೆದಿರುವ ಪೀಠಿಕೆಯಲ್ಲಿ ಮಹಾಭಾರತ ಅಂದು ನೀಡಿದ ಜೀವನ ಸಂದೇಶ ಇಂದಿಗೂ ಎಷ್ಟು ಉಪಯುಕ್ತ, ಹೀಗೆ ಎಲ್ಲಾ ವಿಚಾರಗಳನ್ನೂ ಸುಂದರ ಸರಳ ಶೈಲಿಯಲ್ಲಿ ವಿವರಿಸಿದ್ದಾರೆ. ಸಂಸಾರ, ತಪಸ್ಸು ಇವುಗಳ ವಿಶ್ಲೇಷಣೆಯನ್ನು ಗಂಭೀರವಾಗಿ ಚಿತ್ರಿಸಿದ್ದಾರೆ. ಕನ್ನಡಿಗರು ವಚನ ಭಾರತವನ್ನು ಕನ್ನಡದ 'ವ್ಯಾಸ ಭಾರತ' ವೆಂದು ಕರೆದಿದ್ದಾರೆ.

'ಕಥಾಮೃತ' ಒಂದು ಕನ್ನಡದಲ್ಲಿ ಬೃಹತ್ ಗ್ರಂಥ ವಾಗಿದೆ. ಮೂಲ ಬೃಹತ್ಕಥೆ ಗದ್ಯ ಪದ್ಯ ರೂಪದಲ್ಲಿತ್ತೆಂದು ಊಹೆ. ಸಂಸ್ಕೃತದಲ್ಲಿ ರಚಿತವಾಗಿರುವ ಕಥಾಸರಿತ್ಸಾಗರ ಮೂಲ ಬೃಹತ್ಕಥೆಗೆ ಹೆಚ್ಚು ಸಮೀಪವರ್ತಿಯಾಗಿದೆ. ಸಣ್ಣ ಸಣ್ಣ ಕಥೆಗಳ ಭಂಡಾರ. ಮಕ್ಕಳು ಇವುಗಳನ್ನೆಲ್ಲಾ ಓದಿ ನೀತಿ ಪಾಠಗಳನ್ನು ಕಲಿಯಲಿ ಎಂಬುದೇ ಇದರ ಉದ್ದೇಶ.

'ಗದಾಯುದ್ಧ ನಾಟಕ ಮತ್ತು ಅದರ ನಾಯಕ' ಕೃಷ್ಣಶಾಸ್ತ್ರಿಗಳು ಕಾಲೇಜಿನಲ್ಲಿ ಮಾಡಿದ ಉಪನ್ಯಾಸದ ಲಿಖಿತ ರೂಪ. 'ನಿರ್ಮಲ ಭಾರತಿ ಅಥವಾ ಮಕ್ಕಳ ಮಹಾಭಾರತ' ಮಕ್ಕಳಿಗಾಗಿ ಶಾಸ್ತ್ರಿಗಳು ಬರೆದದ್ದು.' ವಚನ ಭಾರತ' ಪ್ರೌಢರಿಗಾಗಿ ಬರೆದಿದ್ದಾದ್ದರಿಂದ ಅದನ್ನು ಮಕ್ಕಳು ಅರ್ಥಮಾಡಿಕೊಳ್ಳಲು ಕಷ್ಟವಾಗಬಹುದೆಂದು ರಚಿಸಿದ ಕೃತಿ. ಮುಂದೆ ಬಂದದ್ದು: 'ಬಂಕಿಮ ಚಂದ್ರ'. ಈ ಗ್ರಂಥವು 26.04.1962 ರಂದು ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತಗೊಂಡು ಶಾಸ್ತ್ರಿಗಳ ಸಾಹಿತ್ಯ ಪ್ರತಿಭೆಗೆ ಗೌರವ ಮನ್ನಣೆ ದೊರಕಿಸಿದೆ. ಬಂಕಿಮನು ಬಂಗಾಳಿ ಲೇಖಕ; ಅವನು ತನ್ನ ದೇಶ ಪ್ರೇಮವನ್ನೂ ಬಂಗಾಳಿ ಭಾಷೆಯ ಬಗ್ಗೆ ಆದರವನ್ನೂ ತನ್ನ ಬರಹಗಳ ಮೂಲಕ ಎತ್ತಿ ಹಿಡಿದಿದ್ದಾನೆ.

ಸಾಹಿತ್ಯ ವ್ಯಾಸಂಗವನ್ನು ಮಾಡುವ ಕನ್ನಡಿಗರಿಗೆ ಬಂಕಿಮನ ಸಾಧನೆಯ ಪರಿಚಯ ಈ ಗ್ರಂಥದ ಮೂಲಕ ದೊರಕಿದೆ.

'ಭಾಷಣಗಳು ಮತ್ತು ಲೇಖನಗಳು' ಶಾಸ್ತ್ರಿಗಳು ಹೈದರಾಬಾದ್ ಸಮ್ಮೇಳನದಲ್ಲಿ ಮಾಡಿದ ಭಾಷಣ ಮತ್ತು ಅವರ ಇತರ ಲೇಖನಗಳನ್ನು ಒಳಗೊಂಡಿದೆ. ಇದಲ್ಲದೆ 'ಕವಿ ಜಿಹ್ವಾ ಬಂಧನಂ' ಅವರ ಒಂದು ಸಂಪಾದಕೀಯ ಗ್ರಂಥವಾಗಿದೆ.

ಈ ಮೇಲ್ಕಂಡ ಕೃತಿಗಳಲ್ಲದೆ ಟಿ. ಎಸ್. ವೆಂಕಣ್ಣಯ್ಯನವರೊಡನೆ 'ಶ್ರೀ ರಾಮಕೃಷ್ಣಪರಮಹಂಸರ ಚರಿತ್ರೆ'ಯನ್ನು ರಾಮಕೃಷ್ಣಾಶ್ರಮದವರಿಗಾಗಿ ಬರೆದರು. ಅಲ್ಲದೆ ಇಬ್ಬರೂ ಸೇರಿ ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯವನ್ನು ಸಂಪಾದಿಸಿ ಮೈಸೂರು ವಿಶ್ವವಿದ್ಯಾನಿಲಯದ 'ಕನ್ನಡ ಗ್ರಂಥ ಮಾಲೆ'ಯಲ್ಲಿ ಪ್ರಕಟಿಸಿದರು. ಇದೇ 'ಹರಿಶ್ಚಂದ್ರ ಕಾವ್ಯ ಸಂಗ್ರಹ'. ಶ್ರೀ ಮಾಸ್ತಿಯವರು ಶಾಸ್ತ್ರಿಗಳನ್ನೂ ವೆಂಕಣ್ಣಯ್ಯನವರನ್ನೂ 'ಹೊಸಗನ್ನಡದ ಅಶ್ವಿನಿ ದೇವತೆಗಳು' ಎಂದು ಶ್ಲಾಘಿಸಿದ್ದಾರೆ. ಇವುಗಳಲ್ಲದೆ ಕೃಷ್ಣಶಾಸ್ತ್ರಿಗಳು ಇನ್ನೂ ಅನೇಕ ಲೇಖನಗಳನ್ನೂ, ವಿಮರ್ಶೆಗಳನ್ನೂ, ಮುನ್ನುಡಿಗಳನ್ನು ಬರೆದಿದ್ದಾರೆ. ಹೀಗೆ ಅವರು ಕನ್ನಡ ಸಾಹಿತ್ಯ ಪ್ರಪಂಚವನ್ನು ಬೆಳೆಸಿ ತಮ್ಮ ಕೃತಿಗಳನ್ನು ಕನ್ನಡ ಜನತೆಗೆ ವಿಶಿಷ್ಟ ಕೊಡುಗೆಯಾಗಿ ಇತ್ತಿದ್ದಾರೆ. ಅವರು ನಮ್ಮನ್ನು ಅಗಲಿದರೂ ಈ ಕೃತಿಗಳು ಬಹುಕಾಲ ಮಾರ್ಗದರ್ಶನ ನೀಡಿ ಮನದಲ್ಲಿ ನಿಲ್ಲುವಂತಹುದಾಗಿವೆ.

ಅಭಿವಂದನೆ, ಗೌರವಗಳು

ಶಾಸ್ತ್ರಿಗಳ ನಿಸ್ಪೃಹ ಸೇವೆಯನ್ನು ಕನ್ನಡ ನಾಡಿನ ಜನ ಮೆಚ್ಚಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ವಿಶ್ವವಿದ್ಯಾನಿಲಯವು ಅವರನ್ನು ಪ್ರಾಧ್ಯಾಪಕ ಹುದ್ದೆಗೆ ಏರಿಸಿ ಗೌರವವನ್ನು ಸೂಚಿಸಿತು. ಆ ಕಾಲದಲ್ಲಿ ಈಗಿನ ಪ್ರಾಧ್ಯಾಪಕರಿಗೆ ಕೊಡುವಷ್ಟು ದೊಡ್ಡ ಸಂಬಳವೇನೂ ಕೊಡುತ್ತಿರಲಿಲ್ಲ. ಆದರೂ 50. ರೂ ಗಳ ಸಂಬಳದಲ್ಲಿ ಟ್ಯೂಟರ್ ಆಗಿ ಕಾಲೇಜಿಗೆ ಸೇರಿದ್ದ ಕೃಷ್ಣಶಾಸ್ತ್ರಿಗಳಿಗೆ ವಿಶ್ವವಿದ್ಯಾನಿಲಯವು ಪ್ರಾಧ್ಯಾಪಕ ಹುದ್ದೆಯನ್ನು ಕೊಟ್ಟಾಗ ಅವರಿಗೆ ಸಂತೋಷವಾಗಿರಬೇಕು. ಇವರು

ಕೂರುತ್ತಿದ್ದ ಪ್ರಾಧ್ಯಾಪಕ ಕೊಠಡಿಯ ವೈಶಿಷ್ಟ್ಯವೆಂದರೆ ಅವರು ಕನ್ನಡ ಲಿಪಿಯ ಬೆಳವಣಿಗೆಯ ಪಟ, ಹಲ್ಮಿಡಿ ಶಾಸನದ ಚಿತ್ರ, ಕನ್ನಡ ನಾಡಿನ ಭೂಪಟ ಮುಂತಾದುವುಗಳನ್ನು ದೊಡ್ಡದಾಗಿ, ಅಂದವಾಗಿ ಬರೆಯಿಸಿ, ಅವನ್ನು ಕಟ್ಟು ಹಾಕಿಸಿ ಶಾಶ್ವತವಾಗಿ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರ ಕೊಠಡಿಯಲ್ಲಿ ಭದ್ರಪಡಿಸಿದ್ದಾರೆ. ಅಲ್ಲದೆ ಕನ್ನಡಕ್ಕಾಗಿ ದುಡಿದ ದೇಶೀಯ ಮತ್ತು ವಿದೇಶೀಯ ಮಹನೀಯರ ಭಾವ ಚಿತ್ರಗಳನ್ನೂ ಸಹ ತೂಗುಹಾಕಿದ್ದಾರೆ. ಇದರಲ್ಲಿ ಅನೇಕವು ಅವರು ತಮ್ಮ ಹಣದಿಂದಲೇ ಮಾಡಿಸಿದ್ದು, ಇದು ಅವರ ಕೊಡುಗೆ ಎಂದು ಎಲ್ಲೂ ಯಾರಿಗೂ ಹೇಳಿಕೊಂಡಿಲ್ಲ. ಈಗಲೂ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ವಿಭಾಗದಲ್ಲಿರುವ ಪ್ರಾಧ್ಯಾಪಕರ ಕೊಠಡಿಯಲ್ಲಿ ಇವೆಲ್ಲವನ್ನೂ ಕಾಣಬಹುದು. ಶಾಸ್ತ್ರಿಗಳು ನಿವೃತ್ತರಾದನಂತರ ಅವರ ಅಭಿಮಾನಿಗಳೂ ಶಿಷ್ಯಂದಿರೂ ಸೇರಿ ಅವರಿಗೆ ಒಂದು ಗ್ರಂಥ ಸಮರ್ಪಣೆ ಮಾಡಬೇಕೆಂದು ಯೋಚಿಸಿ 1956 ರಲ್ಲಿ ಅವರಿಗೆ 'ಅಭಿವಂದನೆ' ಎಂಬ ಹೆಸರಿನ ಲೇಖನಗಳ ಸಂಪುಟವನ್ನು ಸಮರ್ಪಿಸಿದರು. ಹೆಸರಾಂತ ಕನ್ನಡ ಸಾಹಿತಿಗಳೂ, ಅವರ ಶಿಷ್ಯಂದಿರೂ ಇದರಲ್ಲಿ ಲೇಖನಗಳನ್ನು ಬರೆದಿದ್ದಾರೆ. 'ಅಭಿವಂದನೆ' ಸಮರ್ಪಣಾ ಸಮಾರಂಭವು ಮೈಸೂರಿನ ಕ್ರಾಫರ್ಡ್ ಹಾಲಿನಲ್ಲಿ ಶ್ರೀ ಕೆ.ವಿ.ಪುಟ್ಟಪ್ಪ ನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಂದು ಅವರ ಅಭಿಮಾನಿಗಳೂ ಶಿಷ್ಯವರ್ಗದವರೂ ತೋರಿದ ಭಕ್ತಿ-ಗೌರವಗಳನ್ನು ಶಾಸ್ತ್ರಿಗಳೂ ಯಾವಾಗಲೂ ನೆನೆಯುತ್ತಿದ್ದರು. ಇದು ಒಬ್ಬ ಸಾಮಾನ್ಯ ಕನ್ನಡ ಮೇಷ್ಟರಿಗೆ ಶಿಷ್ಯವೃಂದವು ತೋರಿಸಿದ ದೊಡ್ಡ ಗೌರವ ಎಂದು ಯಾವಾಗಲೂ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು.

ಮೈಸೂರು ವಿಶ್ವವಿದ್ಯಾನಿಲಯವು ಶಾಸ್ತ್ರಿಗಳ ಸೇವೆಯನ್ನು ಮಾನ್ಯ ಮಾಡಿ 1960 ರಲ್ಲಿ ಗೌರವ ಡಾಕ್ಟೊರೇಟ್ ಪದವಿಯನ್ನು ನೀಡಿತು. ತಾವು ಸೇವೆ ಸಲ್ಲಿಸಿದ ವಿದ್ಯಾಪೀಠಕ್ಕೆ ನಮಿಸಿ ತಮ್ಮನ್ನು ಗೌರವಿಸಿದ್ದಕ್ಕೆ ತಮ್ಮ ಸಂತೋಷವನ್ನು ಸೂಚಿಸಿದರು. ಗೌರವವನ್ನು ಸ್ವೀಕರಿಸುತ್ತಾ ಶಾಸ್ತ್ರಿಗಳು ಕನ್ನಡದಲ್ಲಿ ಪ್ರತಿವಂದನೆ ಮಾಡಿದಾಗ ನೆರೆದಿದ್ದ ಸಭಿಕರೂ, ವಿದ್ಯಾರ್ಥಿವೃಂದದವರೂ ದೀರ್ಘ ಕರತಾಡನ ಮಾಡಿ ತಮ್ಮ ಅತೀವ ಮೆಚ್ಚುಗೆಯನ್ನೂ, ಹರ್ಷವನ್ನೂ ಸೂಚಿಸಿದರು. ಶಾಸ್ತ್ರಿಗಳು ಬೆಂಗಳೂರು ಸೆಂಟಲ್ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯ ನೆನಪಿಗಾಗಿ

ಅಲ್ಲಿನ ಕರ್ನಾಟಕ ಸಂಘವು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ 1000 ರೂ. ದತ್ತಿಯನ್ನು ನೀಡಿ, ಅದರಿಂದ ಬರುವ ವಾರ್ಷಿಕ ಬಡ್ಡಿಯಲ್ಲಿ ಪ್ರತಿವರ್ಷವೂ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಮೊದಲ ಸ್ಥಾನ ಗಳಿಸುವ ವಿದ್ಯಾರ್ಥಿಗೆ ಶಾಸ್ತ್ರಿಗಳ ಹೆಸರಿನಲ್ಲಿ ಚಿನ್ನದ ಪದಕವನ್ನು ನೀಡಲು ಆದೇಶಿಸಿತು.

26ನೇ ಏಪ್ರಿಲ್ 1962 ರಂದು ಶಾಸ್ತ್ರಿಗಳ 'ಬಂಕಿಮ ಚಂದ್ರ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ದೊರೆಯಿತು. ಅವರ ಸ್ವಗೃಹದಲ್ಲೇ ಈ ಮನ್ನಣೆಯನ್ನು ನೀಡಲಾಯಿತು. ಈ ಪುಸ್ತಕದ ಮುದ್ರಣ ಕಾರ್ಯವನ್ನೂ ಮೆಚ್ಚಿ ಬಿ.ಬಿ.ಡಿ ಪವರ್ ಪ್ರೆಸ್ ಅವರಿಗೆ ಕರ್ನಾಟಕ ರಾಜ್ಯದ ಉನ್ನತ ಪ್ರಶಸ್ತಿ ದೊರಕಿದ್ದಲ್ಲದೆ, ಮೈಸೂರು ವಿಶ್ವವಿದ್ಯಾನಿಲಯದ್ದೂ ಉತ್ತಮ ಪ್ರಕಟಣೆ ಪ್ರಶಸ್ತಿ ದಕ್ಕಿತು. ಶಾಸ್ತ್ರಿಗಳ ಮರಣಾನಂತರವೂ ಅನೇಕ ಸಂಘ ಸಂಸ್ಥೆಗಳು ಮರಣೋತ್ತರ ಗೌರವ ಹಾಗೂ ಸ್ಮರಣೆಯಲ್ಲಿ ತೊಡಗಿಕೊಂಡವು. ಅವು ಪ್ರಮುಖವಾಗಿ: ಎ.ಆರ್.ಕೃ ಸಂಸ್ಕೃತಿ ಪೀಠ, ಎನ್.ಎಮ್.ಕೆ.ಆರ್.ವಿ ಮಹಿಳಾ ಕಾಲೇಜು, ಸಾಹಿತಿಗಳ ಕಲಾವಿದರ ಬಳಗ, ಕನ್ನಡ ಶಕ್ತಿ ಕೇಂದ್ರ, ಕರ್ನಾಟಕ ಲೇಖಕರ ಸಂಘ, ರಿಸರ್ವ್ ಬ್ಯಾಂಕ್ ಕನ್ನಡ ಸಂಘ, ಹೊಯ್ಸಳ ಕರ್ನಾಟಕ ಸಂಘ, ಪ್ರಬುದ್ಧ ಕರ್ನಾಟಕ ಇತ್ಯಾದಿ.

ಹೀಗೆ ಶಾಸ್ತ್ರಿಗಳು ಇರುವವರೆಗೂ ಒಂದು ರೀತಿಯಲ್ಲಿ ಕನ್ನಡ ಸೇವೆಯನ್ನು ಮಾಡುತ್ತಾ ಬಂದಿದ್ದು ಜನರು ಅವರ ಉಪಕಾರವನ್ನು ಮರೆಯದೆ ಈಗಲೂ ನಾಡಿನ ಹಿರಿಯರು ಕಿರಿಯರೂ ಅವರ ಸೇವೆಯನ್ನು ಸ್ಮರಿಸುತ್ತಿರುವುದೇ ಅವರ ಪಾಂಡಿತ್ಯಕ್ಕೆ, ಅವರು ನಡೆಸಿದ ಕನ್ನಡದ ಹೋರಾಟಕ್ಕೆ ಸಾಕ್ಷಿ ಎನ್ನಬಹುದು.

ಕೆಲವು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರವು ಶಾಸ್ತ್ರಿಗಳು ಹುಟ್ಟಿದ ಅಂಬಳೆ ಗ್ರಾಮವನ್ನು ಅಭಿವೃದ್ಧಿಪಡಿಸಿ ಅಲ್ಲಿ ಅವರ ಸ್ಮಾರಕವನ್ನು ಸ್ಥಾಪಿಸುವ ಬಗ್ಗೆ ನಿರ್ಧರಿಸಿದರೂ ಸಧ್ಯಕ್ಕೆ ಈ ಕಾರ್ಯದಲ್ಲಿ ಯಾವ ಪ್ರಗತಿಯೂ ಕಂಡು ಬಂದಿಲ್ಲ. ಅವರು ವಾಸದಲ್ಲಿದ್ದ ಬೆಂಗಳೂರಿನ ಬಸವನಗುಡಿಯಲ್ಲಿರುವ ಬಾಂದುನವರ ಬೀದಿಗೆ ಇತ್ತೀಚೆಗೆ ಡಾ.ಎ.ಆರ್.ಕೃಷ್ಣಶಾಸ್ತ್ರಿ ರಸ್ತೆ ಎಂದು ನಾಮಾಂಕಿತವಾಗಿದೆ.

ಶಾಸ್ತ್ರಿಗಳ ಸಮಕಾಲೀನರು ಮತ್ತು ಶಿಷ್ಯವೃಂದ

ಶಾಸ್ತ್ರಿಗಳ ಜೀವನದಲ್ಲಿ ಅನೇಕ ಹಿರಿಯ ಕನ್ನಡ ವಿದ್ವಾಂಸರುಗಳು, ಕವಿಗಳು, ಅಧ್ಯಾಪಕರುಗಳು, ಶಿಷ್ಯರು ಅವರೊಡನೆ ಸ್ಪಂದಿಸಿದರು. ಅವರುಗಳಲ್ಲನೇಕರು ಶಾಸ್ತ್ರಿಗಳ ಬಗ್ಗೆ ಬರೆದಿರುವ ಅನಿಸಿಕೆಗಳನ್ನು ಮತ್ತು ಅವರಲ್ಲಿಟ್ಟಿದ್ದ ಗೌರವ ಮಮತೆಗಳನ್ನು ಅರಿಯಲು ಪ್ರಬುದ್ಧ ಕರ್ಣಾಟಕದ 'ದಿವಂಗತ ಡಾ. ಎ.ಆರ್. ಕೃಷ್ಣಶಾಸ್ತ್ರಿಗಳ ನೆನಪಿನ ಸಂಚಿಕೆ' (1968), ಪ್ರಬುದ್ಧ ಕರ್ಣಾಟಕದ 'ಚಿನ್ನದ ಸಂಚಿಕೆ' (1969) ಮತ್ತು 'ಅಭಿವಂದನೆ' (ಶಾಸ್ತ್ರಿಗಳ ಶಿಷ್ಯರೂ, ಮಿತ್ರರೂ ಅರ್ಪಿಸಿದ ಪ್ರಬಂಧಗಳ ಸಂಪುಟ) ಇವುಗಳನ್ನು ಓದಲೇ ಬೇಕು.

ಮಾನ್ಯರಾದ ರಾಷ್ಟ್ರಕವಿ ಕುವೆಂಪು, ದ.ರಾ.ಬೇಂದ್ರೆ, ಸಿ.ಕೆ.ವೆಂಕಟರಾಮಯ್ಯ, ಜಿ.ವೆಂಕಟಸುಬ್ಬಯ್ಯ, ಹೆಚ್.ಎಂ.ಶಂಕರನಾರಾಯಣರಾವ್, ಎಸ್.ವಿ.ಪರಮೇಶ್ವರ ಭಟ್ಟ, ಶ್ರೀನಿವಾಸರಾವ್ ಕೊರಟಿ, ಎಸ್.ವಿ.ರಂಗಣ್ಣ, ಎಂ.ವಿ.ಸೀತಾರಾಮಯ್ಯ, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಹಾ.ಮ.ನಾಯಕ್, ದೇ.ಜವರೇಗೌಡ, ಪ್ರಭುಶಂಕರ, ಹಂ.ಪ.ನಾಗರಾಜಯ್ಯ, ಚಿ.ನಾ.ಮಂಗಳ–ಹೀಗೆ ಕನ್ನಡಕ್ಕೆ ದುಡಿದವರನೇಕರು ಶಾಸ್ತ್ರಿಗಳೊಡನೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧ ಹೊಂದಿದ್ದು ಅವರಿಂದ ಸ್ಫೂರ್ತಿ ಹಾಗೂ ಮಾರ್ಗದರ್ಶನ ಪಡೆದಿದ್ದಾರೆ.

ಶಾಸ್ತ್ರಿಗಳ ಸಮಕಾಲೀನರು ಅವರಿಗೆ ತೋರಿಸುತ್ತಿದ್ದ ಮರ್ಯಾದೆ, ಗೌರವಗಳ ಬಗ್ಗೆ ತಿಳಿಯುವುದೇ ಒಂದು ಸಂತಸದ ವಿಷಯ. ಕುವೆಂಪು ಅವರು ಕೃಷ್ಣಶಾಸ್ತ್ರಿಗಳು ತನ್ನನ್ನು ಕನ್ನಡ ಎಂ.ಎ. ಮಾಡಲು ಒತ್ತಾಯಿಸದಿದ್ದರೆ, ಶ್ರೀ ರಾಮಾಯಣ ದರ್ಶನದಂತಹ ಮೇರು ಕೃತಿಗೆ ಬೇಕಾಗುವ ಪದಸಂಪತ್ತನ್ನೂ, ಮಹಾ ಶೈಲಿಯನ್ನೂ ಖಂಡಿತವಾಗಿ ಪಡೆಯಲಾಗುತ್ತಿರಲಿಲ್ಲ ಎಂದಿದ್ದಾರೆ. ದ.ರಾ.ಬೇಂದ್ರೆಯವರು ಶಾಸ್ತ್ರಿಗಳ ಒತ್ತಾಯದಿಂದ ಪುಸ್ತಕ ವಿಮರ್ಶೆ, ಲೇಖನ ಇವುಗಳನ್ನು ಬರೆದರು. ಶಾಸ್ತ್ರಿಗಳು ತಮ್ಮ ಸಾಹಿತ್ಯ ಪ್ರಪಂಚದಲ್ಲಿ ಬೆಳೆಸಿಕೊಂಡ ಬಂಧುವರ್ಗ ದೊಡ್ಡದಾಗಿತ್ತು. ಮಾಸ್ತಿಯವರು ಟಿ.ಎಸ್.ವೆಂಕಣ್ಣಯ್ಯ ಹಾಗೂ ಕೃಷ್ಣಶಾಸ್ತ್ರಿಗಳ ಸಹಯೋಗ ಕನ್ನಡ ವ್ಯವಸಾಯವನ್ನು ಎಷ್ಟು ಹೊಗಳಿದರೂ ಸಾಲದೆಂದು ಹೇಳಿ, 'ಒಂದು ಗುರಿಯ ಸಾಧನೆಯಲ್ಲಿ ಈ ಇಬ್ಬರ ಬಾಳು

ಒಂದಾಗಿ ಬೆರೆಯಿತು. ಈ ಯಮಳ ಜೀವನ ಹೊಸ ಕನ್ನಡದ ಅಶ್ವಿನಿ ದೇವತೆ ಆಯಿತು' ಎಂದಿದ್ದಾರೆ. ಬಿ.ಶಿವಮೂರ್ತಿಶಾಸ್ತ್ರಿಗಳು ಕೃಷ್ಣಶಾಸ್ತ್ರಿಗಳನ್ನು ಕುರಿತು ತಾವು ಕಂಡ 'ಕನ್ನಡ ವ್ಯಾಸ' ಎಂದಿದ್ದಾರೆ.

ಶಾಸ್ತ್ರಿಗಳ ವ್ಯಕ್ತಿತ್ವ

ಶಾಸ್ತ್ರಿಗಳಿಗೆ ತಾಯಿ ಇಲ್ಲದಿದ್ದುದರಿಂದ ತಂದೆಯವರ ವಾತ್ಸಲ್ಯಾತಿಶಯಗಳಿಗೆ ಪಾತ್ರರಾದರು. ಶುದ್ಧ ವೈದಿಕ ಮನೆತನದ ಆಚಾರ ವಿಚಾರಗಳು ಅವರಲ್ಲಿ ಸಹಜವಾಗಿಯೇ ಮೂಡಿತ್ತು. ಬಣ್ಣ ಕಪ್ಪು ಆದರೂ ಎತ್ತರದ ಗಂಭೀರ ನಿಲುವು ಅವರದಾಗಿತ್ತು. ಗರಡಿಯಲ್ಲಿ ಪಳಗಿದ ಮತ್ತು ಚಾಮುಂಡಿ ಬೆಟ್ಟವನ್ನು ಹತ್ತಿ ಇಳಿದು ಮಾಡುವ ಅಭ್ಯಾಸ ಬಲದಿಂದ ಅವರಿಗೆ ಆರೋಗ್ಯ ಸೂಸುವ ಶರೀರ ಸಂಪತ್ತು ಇತ್ತು. ಶಿಸ್ತಿನ ಜೀವನ ಕ್ರಮದೊಂದಿಗೆ ನಿರಹಂಕಾರ, ನಿಷ್ಕಾಮಕರ್ಮ ಇವೆಲ್ಲವೂ ಅವರ ವ್ಯಕ್ತಿತ್ವಕ್ಕೆ ಮೆರುಗು ಕೊಟ್ಟಿತ್ತು. ಸಂಗೀತ, ಸಾಹಿತ್ಯ, ನಾಟಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಅವರಿಗೆ ಆಸಕ್ತಿ ಇತ್ತು. ಯಾವಾಗಲೂ ಶುಭ್ರವಾಗಿ ಒಗೆದ ಬಟ್ಟೆಗಳನ್ನು ಧರಿಸುತ್ತಿದ್ದರು. ಗರಿ ಗರಿ ಬೆಳ್ಳನೆಯ ಪಂಚೆ, ಉದ್ದನೆಯ ಕರಿ ಕೋಟು, ಜರತಾರಿ ರುಮಾಲು, ಕಾಲಿಗೆ ಚಪ್ಪಲಿ–ಇವು ಅವರ 'ಅಫಿಶಿಯಲ್ ಡ್ರೆಸ್'. ಅವರ ಅನುದಿನದ ದೇವತಾಕಾರ್ಯ, ದೇಹಾರೋಗ್ಯ ಕಾಪಾಡಿಕೊಳ್ಳುವ ಶಿಸ್ತಿನ ಜೀವನ, ಉನ್ನತ ಪಾಂಡಿತ್ಯ ಇವುಗಳೆಲ್ಲಾ ಅವರ ಮುಖದಲ್ಲಿ ತೇಜಸ್ಸು ಮತ್ತು ಗಾಂಭೀರ್ಯವನ್ನು ತಂದು ಕೊಟ್ಟಿತ್ತು. ಆಗಿನ ಕಾಲಕ್ಕೆ ಹಣೆಯಲ್ಲಿ ಸಾದಿನ ಬೊಟ್ಟು ಮತ್ತು ವಿಭೂತಿ ಇಡುತ್ತಿದ್ದ ಶಾಸ್ತ್ರಿಗಳು ನಾಲ್ಕು ಜನರ ಮಧ್ಯದಲ್ಲಿ ಎದ್ದು ಕಾಣುತ್ತಿದ್ದರು.

ಮುಂಜಾನೆ ಎದ್ದ ಕೂಡಲೇ ವ್ಯಾಯಾಮ ಮಾಡಿ ಸ್ನಾನಕ್ಕೆ ಮೊದಲು ಕಾಫಿ ಕುಡಿದು, ಸ್ನಾನಾನಂತರ ದೇವರ ಪೂಜೆ, ದಿನ ನಿತ್ಯವೂ ವಿಷ್ಣುಸಹಸ್ರ ನಾಮ ಪಠಣ, ಶುಕ್ರವಾರ ಮತ್ತು ಮಂಗಳವಾರದಂದು ಲಲಿತಾ ಸಹಸ್ರನಾಮ ಹೇಳುತ್ತಿದ್ದರು. ಬಾವಿಯಿಂದ ನೀರು ಸೇದಿ ಹೂ ಗಿಡಗಳಿಗೆ ನೀರೆರೆಯುವ ವಾಡಿಕೆಯೂ ಅವರಿಗಿತ್ತು. ಬಣ್ಣ ಬಣ್ಣದ ಗುಲಾಬಿ ಮತ್ತು ದಾಸವಾಳ ಹೂಗಳಿಂದ ದೇವರನ್ನು ಅಲಂಕರಿಸುತ್ತಿದ್ದರು. ದಿನವೂ ಪ್ರಾಣಾಯಾಮ ಮಾಡಿ

ಮಂಗಳಾರತಿ ಮಾಡುತ್ತಿದ್ದರು. ಮೈಸೂರಿನಲ್ಲಿದ್ದಾಗ ದಿನವೂ ಸೈಕಲ್ ಏರಿ 100 ಅಡಿ ರಸ್ತೆಗೆ ಹೋಗಿ, ತರಕಾರಿ, ಹಣ್ಣು ಮತ್ತು ಮನೆಗೆ ಬೇಕಾದ ಸಾಮಾನುಗಳನ್ನು ತರುತ್ತಿದ್ದುದ್ದೂ ಉಂಟು. ನಿವೃತ್ತರಾದಮೇಲೆ ಬೆಂಗಳೂರಿಗೆ ಬಂದು ನೆಲಸಿ ಗಾಂಧಿ ಬಜಾರಿಗೆ ಹೋಗಿ ಇದೇ ರೀತಿ ವ್ಯಾಪಾರ ಮಾಡುತ್ತಿದ್ದರು. ಸಿಹಿ ತಿಂಡಿಗಳೆಂದರೆ ಅವರಿಗೆ ಪಂಚಪ್ರಾಣ. ಅದರಲ್ಲೂ ದಂರೋಟ್, ಜಾಮೂನ್, ಬಾದಾಮಿ ಹಲ್ವ ಇವೆಲ್ಲಾ ಅವರು ಹೆಚ್ಚಾಗಿ ಇಷ್ಟಪಡುತ್ತಿದ್ದ ಸಿಹಿ ತಿಂಡಿಗಳು. ಅವರು ಸಿಹಿ ತಿನ್ನುವಾಗ ಮಕ್ಕಳು ಮೊಮ್ಮಕ್ಕಳನ್ನು ಮರೆಯುತ್ತಿರಲಿಲ್ಲ. ಅವರು ಆಚರಿಸುತ್ತಿದ್ದ ಬನಶಂಕರಿ ಹುಣ್ಣಿಮೆಯ ವಿಷಯ ನಿಮಗೆ ತಿಳಿಸಲೇ ಬೇಕು. ಕಳಶವಿಟ್ಟು ಪೂಜೆ ಮಾಡಿದ ನಂತರ ಅವರ ಮನೆಯಲ್ಲಿ ಊಟಕ್ಕೆ ಎಲೆ ಮೇಲೆ ಬಡಿಸುತ್ತಿದ್ದ ಬಿಸಿ ಬಿಸಿ ಪಾಯಸ, ಬೇಳೆ ಒಬ್ಬಟ್ಟು ಇವುಗಳನ್ನು ನೆನೆದರೆ ಈಗಲೂ ಬಾಯಲ್ಲಿ ನೀರು ಬರುತ್ತದೆ. ಎಷ್ಟು ಕೆಲಸ ಮಾಡಿದರೂ ಒಂದು ದಿನವೂ ಶಾಸ್ತ್ರಿಗಳು ಮಧ್ಯಾಹ್ನ ಮಲಗುತ್ತಿರಲಿಲ್ಲ. ವಾಯು ಸಂಚಾರಕ್ಕೆ ಹೋಗುತ್ತಿದ್ದರೂ ಸಭೆ ಸಮಾರಂಭಗಳಿಂದ ದೂರವೇ ಇರುತ್ತಿದ್ದರು. ತಮ್ಮ ಮನಸ್ಸಿನ ನೋವನ್ನು ಯಾರ ಮುಂದೆಯೂ ಹೇಳುತ್ತಿರಲಿಲ್ಲ. ಯಾರಾದರೂ ಅವರ ಭಾವ ಚಿತ್ರವನ್ನು ಕೇಳಿದರೆ ನಿರ್ದಾಕ್ಷಿಣ್ಯವಾಗಿ ಇಲ್ಲ ಎನ್ನುತ್ತಿದ್ದರು. ಅವರ ಅಭಿಮಾನಿಗಳು ಹೆಚ್ಚು ಬಲವಂತ ಮಾಡಿದರೆ ಮಾತ್ರ ಕೊಡುತ್ತಿದ್ದರು. ಯಾರಾದರೂ ಕಾಶಿ ರಾಮೇಶ್ವರಕ್ಕೆ ಹೋಗಿ ಬನ್ನಿ, ಗಂಗಾ ಸ್ನಾನ ಮಾಡಿ ಬನ್ನಿ ಎಂದರೆ ಅದೆಲ್ಲಾ ನನಗೆ ಮನೆಯಲ್ಲೇ ಸಿಕ್ಕಿದೆ, ನನ್ನ ಮೊಮ್ಮಗಳು ನನ್ನ ಹೆಸರಿನಲ್ಲಿ ಗಂಗಾ ಸ್ನಾನ ಮಾಡಿ ಬಂದಿದ್ದಾಳೆ, ಆ ಪುಣ್ಯ ನನಗೆ ಆಗಲೇ ಸಿಕ್ಕಿದೆ ಎನ್ನುತ್ತಿದ್ದರು. ಇಷ್ಟು ಸರಳವಾಗಿತ್ತು ಅವರ ವ್ಯಕ್ತಿತ್ವ

ಮೊದಲೇ ತಿಳಿಸಿದ ಹಾಗೆ ಅವರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕರ ಕೊಠಡಿಯಲ್ಲಿ ಮಾಡಿದ ಸಾಹಿತ್ಯಾಲಂಕಾರದಮೇಲೆ ಅವರು ಸಹಸ್ರಾರು ರೂಪಾಯಿಗಳ ವಸ್ತುಗಳನ್ನು ಸಂಗ್ರಹಿಸಿದಾಗ ಸ್ವಂತವಾಗಿ ಮಾಡಿದ ಖರ್ಚಿನ ಬಗ್ಗೆ ಎಂದೂ ತೋರ್ಪಡಿಸಲಿಲ್ಲ. ಅದಲ್ಲದೇ ಅವರ ತಂದೆಯ ಹೆಸರಿನಲ್ಲಿ ಕನ್ನಡದಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗೆ ಸ್ವರ್ಣ ಪದಕ ಹಾಗೂ ತಾಯಿಯ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದೇವರನಾಮ ಸ್ಪರ್ಧೆ

ಏರ್ಪಡಿಸಿ ಅದರಲ್ಲಿ ಗೆದ್ದವರಿಗೆ ಬಹುಮಾನ ಕೊಡುವಂತೆ ಏರ್ಪಾಡು ಮಾಡಿದ್ದಾರೆ.

ಕೃಷ್ಣಶಾಸ್ತ್ರಿಗಳು ತಮ್ಮ ದಿನ ನಿತ್ಯ ಜೀವನವನ್ನು ಮುಕ್ತವಾಗಿ ಬಳಸಿಕೊಂಡರು. ಜೊತೆಗೆ ಒಬ್ಬ ಸಾಹಿತಿ, ಕತೆಗಾರ, ಪತ್ರಿಕಾಕರ್ತ, ಪ್ರಬಂಧನಕಾರ, ವಿಮರ್ಶಕ ಮತ್ತು ವಾಗ್ಮಿಯಾಗಿ ಕನ್ನಡ ನಾಡನ್ನು ಬೆಳಗಿದರು. ಸದ್ದು ಗದ್ದಲವಿಲ್ಲದೆ ಕನ್ನಡದ ಅಭಿಮಾನವೇ ಇಲ್ಲದ ಕಾಲದಲ್ಲಿ ಧನಸಹಾಯವೂ ಇಲ್ಲದೆ ಕನ್ನಡಾಂಬೆಯ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು.

ಪ್ರಬಂಧಗಳನ್ನು ಹೇಗೆ ಬರೆಯಬೇಕೆಂದು ಅವರು ತಿಳಿಯ ಹೇಳುತ್ತಿದ್ದುದು ಹೀಗೆ ಎನ್ನುತ್ತಾರೆ ಅವರ ಶಿಷ್ಯರು: ಪದಪ್ರಯೋಗದಿಂದ ಯಾರ ಮನಸ್ಸೂ ನೋವಾಗಬಾರದು; ಪ್ರಬಂಧಗಳು ಸರಳವಾಗಿ ಸುಲಭವಾಗಿ ಹತ್ತಾರು ಜನರಿಗೆ ಅರ್ಥವಾಗುವ ಹಾಗೆ ಇರಬೇಕು; ಅಲ್ಪಪ್ರಾಣ ಮಹಾಪ್ರಾಣಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು.

ಶಾಸ್ತ್ರಿಗಳು ಕನ್ನಡ ಪುಸ್ತಕಗಳನ್ನು ಎಲ್ಲಿ ಅರ್ಧ ಬೆಲೆಗೆ ಸಿಗುತ್ತದೆಯೋ ಅಲ್ಲಿ ಕೊಂಡುಕೊಳ್ಳಲು ಹೇಳುತ್ತಿದ್ದರಂತೆ. ತಮಗೆ ಬರುತ್ತಿದ್ದ 50 ರೂ. ನಲ್ಲಿ ಎಷ್ಟೋ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಕೊಳ್ಳಲು, ಪರೀಕ್ಷೆಗೆ ಹಣ ಕಟ್ಟಲು ಸಹಾಯ ಮಾಡುತ್ತಿದ್ದರಂತೆ. ಶಿಷ್ಯರು ಬರೆದ ಉತ್ತರಗಳನ್ನು ಲೇಖನಗಳನ್ನು ಓದಿ ತಪ್ಪು-ಒಪ್ಪುಗಳನ್ನು ಬರೆದು ಕಳಿಸುತ್ತಿದ್ದರಂತೆ. ವಿಮರ್ಶೆ ಮಾಡುವುದೂ ಒಂದು ಕಲೆಯಾಗಿದ್ದು, ಅವರಲ್ಲಿದ್ದ ಗದ್ಯ ಸಾಹಿತ್ಯ ಪಾಂಡಿತ್ಯದ ಹಿನ್ನೆಲೆಯಲ್ಲಿ, ಕೃಷ್ಣ ಶಾಸ್ತ್ರಿಗಳ ವಿಮರ್ಶನ ಶಕ್ತಿ ಅಮೋಘವಾದದ್ದು ಎಂದರೆ ಅತಿಶಯೋಕ್ತಿಯಾಗಲಾರದು.

ಕೊನೆಯ ದಿನಗಳು : ನಿಧನ

ದಿನ ನಿತ್ಯ ವ್ಯಾಯಾಮ ಹಾಗೂ ನಿರಂತರ ಚಟುವಟಿಕೆಯಲ್ಲಿ ಪೋಷಿತಗೊಂಡು ಬಲಿಷ್ಠಕಾಯವಾಗಿದ್ದ ಶಾಸ್ತ್ರಿಗಳ ದೇಹಕ್ಕೂ ಮುಪ್ಪು ತಗಲಿತು. ಒಮ್ಮೆ ಸೈಕಲ್ ಬಡಿದ ಆಕಸ್ಮಿಕದಿಂದ, ನಂತರ, ಹೊಟ್ಟೆ ವೇದನೆಯಿಂದ ಶಾಸ್ತ್ರಿಗಳು ಕೊನೆಗೂ

ತಗ್ಗಿದರು. ಒಮ್ಮೆ ಅಸ್ವಸ್ಥತೆಯಿಂದ ವಿಶ್ರಾಮಕ್ಕೆಂದು ಮಲ್ಲೇಶ್ವರಂನಲ್ಲಿದ್ದ ತಮ್ಮ ಮಗಳ ಮನೆಗೆ ಬಂದಾಗ ಅವರ ವೈದ್ಯರು ಶಾಸ್ತ್ರಿಗಳಿಗೆ ಇಂಜಕ್ಷನ್ ಕೊಡುವುದು ಅನಿವಾರ್ಯವೆಂದರು. ವೈದ್ಯರೊಡನಿದ್ದ ಶಾಸ್ತ್ರಿಗಳ ಮೊಮ್ಮಗ ಸಿ.ಆರ್.ಸತ್ಯ ಹೇಳಿದ್ದು: ಶಾಸ್ತ್ರಿಗಳಿಗೆ ಗಾಬರಿ ಆಯಿತು. ನನ್ನ ಜೀವಮಾನದಲ್ಲೇ ನಾನು ಇಂಜಕ್ಷನ್ ತೆಗೆದುಕೊಂಡವನಲ್ಲ, ಏನೂ ಪ್ರಮಾದವಾಗುವುದಿಲ್ಲವೇ ಡಾಕ್ಟರೇ? ಎಂದರು. ಡಾಕ್ಟರು ನಗುತ್ತಾ, ಇಲ್ಲ ಇದು ನಿಮ್ಮ ಗುಣಮುಖಕ್ಕೆ ಅಗತ್ಯ. ಪ್ರಮಾದವಾದರೂ ಏನು? ಇಂಜಕ್ಷನ್ನಿನ ಸೂಜಿ ಮುರಿದೀತು ಅಷ್ಟೆ! ಎಂದು ನಗುತ್ತಾ ಚಕ್ಕನೇ ಚುಚ್ಚೇಬಿಟ್ಟರು. ಶಾಸ್ತ್ರಿಗಳ ಮುಖದಲ್ಲಿ ಮೊದಲು ಸಿಡಿಲೆರದ ಹಾಗಾಗಿ ನಂತರ ಒಂದು ಮಿಂಚು ನಗೆ ಕಾಣಿಸಿತು.


1968ನೇ ಇಸವಿ ಫೆಬ್ರವರಿ 1 ರಂದು ರಾತ್ರಿ ಬೆಂಗಳೂರಿನ ಬಾಂದುನವರ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ಶಾಸ್ತ್ರಿಗಳು ನಿಧನರಾದರು. ಈ ಮನೆ ಇಂದಿಗೂ ಇದ್ದು, ಅವರ ಮಗಳಾದ ಡಾ.ಶಾಂತ ಅವರು ಅಲ್ಲಿ ವಾಸವಾಗಿದ್ದು, ಅವರ ನಂತರ ಈಗ ಆಕೆಯ ಮಕ್ಕಳ ಮಾಲೀಕತ್ವದಲ್ಲಿದೆ. ಅವರಿದ್ದ ಮನೆಯ ವರಾಂಡದಲ್ಲಿ ಮತ್ತು ಶಾಸ್ತ್ರಿಗಳ ಕಾರ್ಯ ಕೊಠಡಿಯಲ್ಲಿ ಅದೆಷ್ಟು ಸಾಹಿತ್ಯ ಸಮಾಲೋಚನೆಗಳು, ಸಾಹಿತ್ಯ ಬುಗ್ಗೆಗಳು ಎದ್ದು ಬಂದವೋ!

ಬಸವಣ್ಣನವರು 'ಸ್ಥಾವಿರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದಂತೆ ಶಾಸ್ತ್ರಿಗಳ ಸಾಹಿತ್ಯ ಕೊಡುಗೆ ಎಂದಿಗೂ ಅನಂತವಾಗಿರುತ್ತದೆ. 1960 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಅರ್ಪಿಸಿದ್ದ ಡಿ.ಲಿಟ್ ಪದವಿಯನ್ನು ಸ್ವೀಕರಿಸುತ್ತಾ ಶಾಸ್ತ್ರಿಗಳು ಹೇಳಿದ್ದು"......ನನ್ನ ವ್ಯಾಸಂಗವೆಲ್ಲಾ ಮೈಸೂರಿನಲ್ಲಿ. ನನ್ನ ಸೇವೆಯೆಲ್ಲಾ ಮೈಸೂರು ವಿಶ್ವವಿದ್ಯಾನಿಲಯಕ್ಕೆ. ಅದು ಹುಟ್ಟಿದಾಗ ನಾನು ಕಾಲೇಜಿನ ಉಪಾಧ್ಯಾಯನಾಗಿದ್ದೆ. ಅದರ ಶೈಶವ, ಬಾಲ್ಯ, ಯೌವನಗಳಲ್ಲಿ ಅದರ ಜೊತೆಗೆ ಬಾಳಿ ಬದುಕಿ ಈಗ ನಾನು ಮುಪ್ಪಾಗಿದ್ದೇನೆ. ಆದರೆ ಸರಸ್ವತಿಗೆ ಮುಪ್ಪಿಲ್ಲ. ಆಕೆ ಚಿರ ಯೌವನೆ. ನನ್ನಂತಹ ಲಕ್ಷೋಪಲಕ್ಷ ಮಕ್ಕಳನ್ನು ಸಾಕುತ್ತಿರುವವಳು". ಅವರ ನಿಧನವನ್ನು ಹಂ.ಪಾ. ಅವರು 'ಸರಸ್ವತಿಯ ಮನೆಯಲ್ಲಿ ಕಳವು" ಎಂದು ಶೋಕಿಸಿದರು.

ಆಧಾರ:

1. ಪ್ರಬುದ್ಧ ಕರ್ನಾಟಕ, ಸಂಪುಟ 50, ಸಂಚಿಕೆ 1, ಮೈಸೂರು ವಿಶ್ವವಿದ್ಯಾನಿಲಯ, 1968
2. 'ಭಾಷಣಗಳು ಮತ್ತು ಲೇಖನಗಳು'- ಎ.ಆರ್.ಕೃಷ್ಣಶಾಸ್ತ್ರಿ, ಶಾರದಾ ಮಂದಿರ, ಮೈಸೂರು
3. 'ಅಭಿವಂದನೆ'- ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳ ಸಂಭಾವನ ಗ್ರಂಥ ಪ್ರಕಟಣ ಸಮಿತಿ, ಮೈಸೂರು 1956
4. ಡಾ.ಎ.ಆರ್.ಕೃಷ್ಣಶಾಸ್ತ್ರಿಗಳ ಜನ್ಮ ಶತಮಾನೋತ್ಸವ ಸ್ಮರಣ ಸಂಚಿಕೆ, ಕರ್ನಾಟಕ ಲೇಖಕರ ಸಂಘ, ಬೆಂಗಳೂರು, 1991.
5. 'ನೂರು ವರ್ಷಗಳ ಅಚ್ಚು ಮೆಚ್ಚು' –ಜಿ.ಪಿ.ರಾಜರತ್ನಂ, 1971
6. 'ಪಂಚ ಕಲಶ ಗೋಪುರ' –ಬಿ.ಜಿ.ಎಲ್..ಸ್ವಾಮಿ, ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು.
7. 'ಎ.ಆರ್.ಕೃಷ್ಣಶಾಸ್ತ್ರಿ'– ಲೀಲಾ ಸುಬ್ರಮಣ್ಯಂ, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು, 1973.
8. 'ಪ್ರಜಾವಾಣಿ' ದಿನ ಪತ್ರಿಕೆ, 3ನೇ ಫೆಬ್ರವರಿ 1968
9. 'ತರಂಗ' ವಾರ ಪತ್ರಿಕೆ, 17 ನೇ ಫೆಬ್ರವರಿ, 1968
10. 'ಪ್ರಜಾಮತ'– 11 ನೇ ಫೆಬ್ರವರಿ 1968
11. 'ಕನ್ನಡ ಕನ್ನಡ ನಿಘಂಟು'–ಭಾಗ 1, 1971 ಹಾಗೂ ಕನ್ನಡ ಸಮ್ಮೇಳನಾಧ್ಯಕ್ಷರು ಭಾಗ 2, ಕನ್ನಡ ಸಾಹಿತ್ಯ ಪರಿಷತ್ತು
12 'ಶ್ರೀಕೃಷ್ಣಸೂಕ್ತಿ' – ಜಿ.ಪಿ.ರಾಜರತ್ನಂ, ನಿರ್ಮಲಭಾರತೀ ಸಂಘ, ಬೆಂಗಳೂರು, 1972
13. 'ಕನ್ನಡವನ್ನು ಉಳಿಸಿ ಬೆಳೆಸಿದವರು'–ಜಿ.ವೆಂಕಟಸುಬ್ಬಯ್ಯ, 1999

***



ಪ್ರಬುದ್ಧ ಕರ್ಣಾಟಕ


ಸಂಪುಟ ೫೦ ಸಂಚಿಕೆ ೧

ದಿವಂಗತ ಪ್ರೊಫೆಸರ್ ಎ. ಆರ್. ಕೃಷ್ಣಶಾಸ್ತ್ರಿಗಳ
ನೆನಪಿನ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೮

ಪ್ರಬುದ್ಧ ಕರ್ಣಾಟಕ
(ದಿವಂಗತ ಎ.ಆರ್. ಕೃಷ್ಣಶಾಸ್ತ್ರಿಗಳ ನೆನಪಿನ ಕಾಣಿಕೆ, ಮೈಸೂರು ವಿಶ್ವವಿದ್ಯಾನಿಲಯ, 1968)

ಕನ್ನಡ ಸೇನಾನಿಯ ಅಶ್ವ : ಬಡ ಸೈಕಲ್ಲು



ಕಾರುಗಳು, ಮೋಟಾರ್ ಸೈಕಲ್‌ಗಳು ಕೈಗೆ ಎಟುಕದ ಕಾಲದಲ್ಲಿ ಶಾಸ್ತ್ರಿಗಳು ಸ್ವಯಂಚಾಲಿತರಾಗಿದ್ದರು: ಅವರೊಡನಿದ್ದ ಅಶ್ವ ಒಂದು ಸೈಕಲ್. ಮನೆ –ಸೆಂಟ್ರಲ್ ಕಾಲೇಜ್ ಅಚ್ಚುಕೂಟಗಳು – ಸಂಘದ ಸದಸ್ಯರ ಮನೆಗಳು ತ್ರಾಣಕ್ಕೆಂದು ಹೋಟೆಲ್‌ಗಳು ಇವು ಶಾಸ್ತ್ರಿಗಳ ದಿನನಿತ್ಯದ ಪ್ರಯಾಣದ ಮೈಲಿಗಲ್ಲುಗಳು. ಶಾಸ್ತ್ರಿಗಳಿಗಿಂತ ಕಿರಿಯರಾದ ಶಿಷ್ಯರು, ಸಂಘದ ಕಾರ್ಯಕರ್ತರು ಅವರ ಓಡಾಟದ ಉತ್ಸುಕತೆ ಬಗ್ಗೆ ಈಗಲೂ ಆಶ್ಚರ್ಯದಿಂದ ಸ್ಮರಿಸುತ್ತಾರೆ. ಕನ್ನಡ ಸಾಹಿತ್ಯದ ಅಭ್ಯುದಯಕ್ಕೆ ತನ್ನದೇ ಆದ ಅಳಿಲು ಸೇವೆಯನ್ನು ಮಾಡಿ, ಅವರ ನಿಧನ ನಂತರವೂ, ಇಪ್ಪತ್ತು ವರ್ಷಗಳ ಕಾಲ ಜೀವಂತವಾಗಿದ್ದು, ಕೊನೆಗೆ ತುಕ್ಕುಬಡಿದು ಚೂರುಪಾರಾಗಿ ಈ ಸೈಕಲ್ಲು ಇಹಲೋಕವನ್ನು ತ್ಯಜಿಸಿತು. ಪ್ರಬುದ್ಧ ಕರ್ಣಾಟಕದ ಮತ್ತು ಕನ್ನಡ ಸಂಘದ ಚಂದಾ ವಸೂಲಿಗೆ ಈ ಸೈಕಲ್ಲಿನ ಕೊಡುಗೆ ಗಮನಾರ್ಹ.

ಕೃಷ್ಣಶಾಸ್ತ್ರಿಗಳು ಮತ್ತು ಕನ್ನಡ ಸಾಹಿತ್ಯ ಪರಿಷತ್ತು


ಶಾಸ್ತ್ರಿಗಳು 5 ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆಯ ಸಂಪಾದಕರಾಗಿದ್ದರು. ಹಾಗೂ, 1943 ರಿಂದ 1957 ರವರೆಗೂ ಪರಿಷತ್ತಿನ ಕನ್ನಡ – ಕನ್ನಡ – ನಿಘಂಟುವಿನ ಸಂಪಾದಕ ಸಮಿತಿಯ ಅಧ್ಯಕ್ಷರಾಗೂ ಸೇವೆ ಸಲ್ಲಿಸಿದರು. ನಂತರ 1941 ರಲ್ಲಿ ನಡೆದ ಹೈದರಾಬಾದ್ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡರು. ಹಿಂದೆ ನಿರಾಕರಿಸಿದ್ದಾದರೂ, ಒತ್ತಾಯದಿಂದ ಮಣಿದು ಶಾಸ್ತ್ರಿಗಳು ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ತಮ್ಮ ಅಧ್ಯಕ್ಷ ಭಾಷಣದಿಂದ ಕನ್ನಡಿಗರ ಸ್ಥಾನಮಾನ ಹಾಗೂ ಕನ್ನಡ ಭಾಷೆಯ ಉಳಿವಿನ ಪ್ರಶ್ನೆಯನ್ನು ಹಿಡಿದೆತ್ತಿ ಕನ್ನಡಿಗರನ್ನು ಹುರಿದುಂಬಿಸಿದರು. ಪರಭಾಷೆಗಳ ಆವೃತ್ತಿಯಿಂದಾಗಿ ಇಂದು ನಮ್ಮ ಕನ್ನಡ ಭಾಷೆಯ ಸ್ಥಿತಿ ಶೋಚನೀಯವಾಗಿದ್ದು, ಶಾಸ್ತ್ರಿಗಳು ಅಂದು ನೀಡಿದ ಆದೇಶ ಈಗಲೂ ಉಪಯುಕ್ತವಾಗಿ ತೋರುತ್ತದೆ.


ಶಾಸ್ತ್ರಿಗಳು ಮತ್ತು ಬೆಂಗಳೂರು ಹೊಯ್ಸಳ ಕರ್ನಾಟಕ ಸಂಘ


ಬೆಂಗಳೂರು ಹೊಯ್ಸಳ ಕರ್ನಾಟಕ ಸಂಘದ ಸ್ಥಾಪನೆಗೆ ಪ್ರೇರಕವಾದವರಲ್ಲಿ ಕೃಷ್ಣಶಾಸ್ತ್ರಿಗಳು ಒಬ್ಬರು. ಬೆಂಗಳೂರಿನ ಹೊಂಬೇಗೌಡನಗರದಲ್ಲಿರುವ ಸಂಘದ ಕಟ್ಟಡದ ಶಂಖು ಸ್ಥಾಪನೆ ಶಾಸ್ತ್ರಿಗಳ ಕೈಗಳಲ್ಲಿ ನೆರವೇರಿತು. ವಿದ್ಯಾರ್ಥಿಗಳ ಮೇಲಿನ ಪ್ರೀತಿ, ಆದರದಿಂದ ತಮ್ಮಲ್ಲಿದ್ದ 200ಕ್ಕೂ ಹೆಚ್ಚು ಅಮೂಲ್ಯ ಪುಸ್ತಕಗಳನ್ನು ಶಾಸ್ತ್ರಿಗಳು ಸಂಘಕ್ಕೆ ದಾನ ಮಾಡಿದ್ದಾರೆ. ಸಂಘವು ಪ್ರತಿವರ್ಷವೂ ಕೃಷ್ಣಶಾಸ್ತ್ರಿಗಳ ಸ್ಮರಣಾ ಕಾರ್ಯದಲ್ಲಿ ನಿರತವಾಗಿದೆ. ಸಂಘದ ಬಾಂಧವರಲ್ಲಿ ಕೃಷ್ಣಶಾಸ್ತ್ರಿಗಳು ಒಬ್ಬ ಮಹಾ ಸಾಧಕರೆಂದು ಗೌರವಿಸಲ್ಪಟ್ಟಿದ್ದಾರೆ.


ಹೊಯ್ಸಳ ಮಾಲೆ























2.3. 2008ರಂದು ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಮೈಸೂರಿನಲ್ಲಿ ಬಿಡುಗಡೆಯಾದ ಹೊಯ್ಸಳ ಮಾಲೆಯ ಮೊದಲ ಪುಸ್ತಕಗಳು.

ಹೊಯ್ಸಳ ಕರ್ನಾಟಕ ಜನಾಂಗವು ಸ್ಮಾರ್ತಬ್ರಾಹ್ಮಣ ಸಂಪ್ರದಾಯದ ಒಂದು ಪುಟ್ಟ ಪಂಗಡ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಇವರ ಇರುವು. ವಿಜಯನಗರದ ಕಾಲದಲ್ಲಿ ಕೆಲವು ಕುಟುಂಬಗಳು ತಮಿಳುನಾಡಿನ ತಂಜಾವೂರು ಪ್ರದೇಶಕ್ಕೆ ತೆರಳಿ, ಇಂದಿಗೂ ಕೆಲವು ಕುಟುಂಬಗಳು ಅಲ್ಲಿಯೇ ನೆಲೆಸಿವೆ. ಸಮಾಜದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜನ ಇಂದು ವಿಶ್ವದ ನಾನಾ ಭಾಗಗಳಲ್ಲಿದ್ದಾರೆ.

ನಮ್ಮ ಪಂಗಡ ಪುಟ್ಟದಾದರೂ ನಮ್ಮ ಅನೇಕ ಜನರು ಪ್ರಖ್ಯಾತರಾಗಿ ಸಮಾಜಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿ ಕೀರ್ತಿಶಾಲಿಗಳಾಗಿದ್ದಾರೆ. ಜನತೆಯ ವಿಶ್ವಾಸ, ಗೌರವ ಮನ್ನಣೆಗೆ ಪಾತ್ರರಾಗಿರುವ ಅನೇಕರೂ, ಉದಯೋನ್ಮುಖ ಪ್ರತಿಭಾವಂತರೂ ಇಂದು ನಮ್ಮೊಡನೆಯೇ ಇದ್ದಾರೆ.

ಈ ಎಲ್ಲಾ ಪ್ರತಿಭಾಸಂಪನ್ನರನ್ನು ನಮ್ಮ ಇಂದಿನ ಪೀಳಿಗೆಗೂ, ಸಮಾಜಕ್ಕೂ, ಪರಿಚಯಿಸಿ, ಪ್ರಚರಿಸಿ, ದಾಖಲಿಸುವ ಸದುದ್ದೇಶದಿಂದ ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘವು ಈ ಹೊಯ್ಸಳ ಮಾಲೆಯ ಪ್ರಕಟಣಾ ಕಾರ್ಯವನ್ನು ಕೈಗೊಂಡಿದೆ.

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027
ಫೋನ್ : +91-80-2227 4411